30. 10. 76

# ಬೆಳಕಿನ ಹನಿಗಳು



ಚಿತ್ರಭಾನು ಪ್ರಕಾಶನ

ಮೈಸೂರು

# ಬೆಳಕಿನ ಹನಿಗಳು



೧

ಕಾಷ್ಠದಲಿ ಕಲ್ಲಿನಲಿ ಮಣ್ಣಿನಲಿ ಭಗವಂತನಿಲ್ಲ;
ದೇವನಿರುವುದು ಭಾವದಲಿ: ಭಾವ ಹೇತು ಸರ್ವತ್ರ.

೨

ದುಡುಕಿ ಕೆಲಸವ ಮಾಡಲಾಗದು, ವಿಪತ್ತುಗಳ
ತವರುಮನೆಯಹುದು ಅವಿವೇಕ;
ತಾನಾಗಿ ವರಿಸುವುದು ಗುಣದಾಸೆಯುಳ್ಳ ಸಿರಿ,
ಪರಿಕಿಸಿಯೆ ಕೆಲಸಗೈವವನ.

೩

ಒಂದೆ ಚಕ್ರದಲಿ ರಥ ಚಲಿಸಲಾರದದೆಂತು,
ಪುರುಷಕಾರವನುಳಿದು ದೈವ ಸಿದ್ಧಿಸದಂತು.

೪

ದುಃಖಾನುಭವದ ತರುವಾಯ ಬಹ ಸುಖವೆ ರಸಪೂರ್ಣ:
ಬಿಸಿಲಿನಲಿ ಬೆಂದವಗೆ ಹೆಚ್ಚು ಸುಖಕರವಹುದು ನೆರಳು.

೫

ಹೇರಾಸೆ ಯಾರದೋ ಅವನೇ ದರಿದ್ರನಾಗಿರಲಿ;
ಶ್ರೀಮಂತನಾರು ಬಡವನು ಯಾರು, ತೃಪ್ತಿಯಿರೆ ಮನದಿ?

೬

ಹರಯ, ಧನಸಂಪತ್ತು, ಅಧಿಕಾರ, ಅವಿವೇಕ–ಇವುಗಳೊಳಗೆ
ಒಂದಿದ್ದರೂ ಅನರ್ಥಕೆ ಸಾಕು; ನಾಲ್ಕಿರಲು ಕೇಳಬೇಕೆ?

೭

ಸಂಸಾರದಲಿ ಮನಸು ಬಳಲಿದವನಿಗೆ ಮೂರು
ವಿಶ್ರಾಂತಿಯೋಗ್ಯವಹ ಸ್ಥಳಗಳಿಹವು:
ಮಡದಿ, ಮಕ್ಕಳು, ಸಂಗ ಸಜ್ಜನರದು.

೮

ಯಾರು ಚೆಲುವನೊ ಅವನ ಹೆಂಡತಿ ಕುರೂಪಿ;
ಯಾರು ಚೆಲುವೆಯೊ ಅವಳ ಪತಿ ರೂಪಹೀನ;
ಇಬ್ಬರೊಳು ಚೆಲುವಿದ್ದರಲ್ಲಿ ದಾರಿದ್ರ್ಯ—
ವಿಧಿಯೆಸಗುತಿಹ ಲೀಲೆಗಳು ಬಹು ವಿಚಿತ್ರ.

೯

ದೊಡ್ಡ ಕುಲದಿಂದೇನು? ಶೀಲ ಬಹು ಮುಖ್ಯ:
ಗಂಧವಿಹ ಹೂಗಳಲಿ ಕ್ರಿಮಿ ಹುಟ್ಟವೇನು?

೧೦

ಹರಿ, ಹರ, ಬ್ರಹ್ಮ, ದೇವತೆಗಳಿಗೆ ಕೂಡ
ಹಣೆಯ ಬರಹದ ಗೆರೆಯನಳಿಸುವುದಶಕ್ಯ.

೧೧

ಸತತ ಅರ್ಥಾಗಮನ, ರೋಗವಿಲ್ಲದವಸ್ಥೆ,
ಪ್ರಿಯಳಾದ, ಪ್ರಿಯವನಾಡುವ ಹೆಂಡತಿ,
ಮೀರಿ ನಡೆಯದ ಪುತ್ರ, ಉಪಯುಕ್ತವಹ ವಿದ್ಯೆ—
ಈ ಆರು ಜೀವಲೋಕದ ಸುಖಗಳು

೧೨

ಹೂವುಗಳ ಸಂಗದಲಿ ಕೀಟವೂ ಸಜ್ಜನರ ಶಿರವನೇರುವುದು:
ಹಿರಿಯರಿಂದ ಪ್ರತಿಷ್ಠೆಗೊಂಡ ಕಲ್ಲೂ ಕೂಡ ದೇವನಾಗುವುದು.

೧೩

ಹಾವಿಗೆರೆದರೆ ಹಾಲ, ವಿಷವೃದ್ಧಿಯಾಗುವುದು, ಅಷ್ಟೆ:
ಮೂರ್ಖನಿಗೆ ಉಪದೇಶಿಸಿದರೆ ಕೋಪವೆ, ಶಾಂತಿಯಿಲ್ಲ.

೧೪

ಬರಿ ಮನೋರಥಗಳಿಂದಲ್ಲ, ಕಾರ್ಯದ ಸಿದ್ಧಿ ಉದ್ಯಮಗಳಿಂದ.
ನಿದ್ರಿಸುವ ಕೇಸರಿಯ ಬಾಯೊಳಗೆ ತಾವಾಗಿ ಪ್ರಾಣಿಗಳು ಹೊಗವು.

೧೫

ಕಾರ್ಯವಾರಂಭಿಸದೆ ಸುಮ್ಮನಿರುವುದು ಮೊದಲ ಬುದ್ಧಿಲಕ್ಷಣವು;
ಆರಂಭಿಸಿದನೋಲೆ ಮುಗಿಸುವುದು ಎರಡನೆಯ ಬುದ್ಧಿಲಕ್ಷಣವು.

೧೬

ಚಿಂತೆ, ಚಿತೆಗಳ ನಡುವೆಯಿರುವುದು ಬಿಂದುಮಾತ್ರದ ಅಂತರ:
ಚಿತೆಯು ಸುಡುವುದು ಜೀವರಹಿತನ, ಚಿಂತೆಯೋ ಜೀವಂತನ.

೧೭

ಬರೆ ಇತರ ಪಾಪಫಲಗಳನು ಬೇಕಾದಂತೆ,
ಸಹಿಸಿಕೊಳ್ಳುವೆನಯ್ಯ, ಚತುರಾನನ;
ರಸಿಕರಲ್ಲದ ಜನಕೆ ಕವಿತೆಯ ನಿವೇದಿಪುದ
ಬರೆಯಬೇಡೆನ್ನ ಹಣೆಯಲಿ, ಬೇಡ, ಬೇಡ.

೧೮

ಶಿಷ್ಯವಿತ್ತವ ಕದಿವ ಗುರುಗಳಿರುವರು ಬಹಳ ಮಂದಿ;
ಶಿಷ್ಯಚಿತ್ತವ ಕದಿವ ಗುರು ಮಾತ್ರ ದುರ್ಲಭನು ಜಗದಿ.

೧೯

ಬರಿಯ ಗೃಹ ಗೃಹವಲ್ಲ, ಗೃಹಿಣಿ ಗೃಹವೆನಿಸಿಕೊಳ್ಳುವಳು;
ಗೃಹಿಣಿಯಿಲ್ಲದ ಗೃಹ ಅರಣ್ಯಸಮವೆಂದು ಹೇಳುವರು.

೨೦

ದಿನದಿನವು ಪ್ರಾಣಿಗಳು ಅಂತಕಾಲಯವನು ಪ್ರವೇಶಿಸುತ್ತಿಹವು;
ಉಳಿದವರು ನಿತ್ಯತೆಯನೆಳಸುವರು— ಇದಕಿಂತ ಚೋದ್ಯವಿನ್ನೇನು?

೨೧

ದೊಡ್ಡವರ ಕಾರ್ಯವನು ಸಾಧಿಸಲು ದೊಡ್ಡವರೆ ಶಕ್ತರಹುದು:
ಸಾಗರವನುಳಿದು ಬೇರಾರು ಧರಿಸುವರು ಬಡಬಾನಲನನು?

೨೨

ಕಾಲಿಂದ ತುಳಿದಾಗ ದೂಳು ಮೇಲಕ್ಕೆದ್ದು ತಲೆಯನಡರುವುದು;
ಅವಮಾನವಾದರೂ ತೆಪ್ಪಗಿಹ ನರನಿಗಿಂತಾ ದೂಳೆ ಮೇಲು.

೨೩

ಬೇಗ ಗ್ರಹಿಸುವುದು, ಚಿರಕಾಲ ಕೇಳುವುದು,
ತಿಳಿದಮೇಲೇನೊಂದ ಆಸೆಪಡವಿಹುದು,
ಕರೆಸಿಕೊಳ್ಳದೆ ಪರಾರ್ಥದಿ ತೊಡಗದಿಹುದು–
ಇದು ಪಂಡಿತನ ಮೊಟ್ಟಮೊದಲ ಲಕ್ಷಣವು.

೨೪

ಒರೆಹಚ್ಚುವುದು, ಕಾಯಿಸುವುದು, ಕತ್ತರಿಸುವುದು,
ಕುಟ್ಟುವುದು– ಈ ನಾಲ್ಕು ಬಗೆಗಳಿಂದ
ಹೊನ್ನ ಪರಿಕಿಸುವಂತೆ ಮನುಜನನು ಪರಿಕಿಪುದು
ವಿದ್ಯೆ, ಗುಣ, ಕುಲ, ಕರ್ಮ–ನಾಲ್ಕರಿಂದ.

೨೫

ಪ್ರಾಯಶಃ ಶ್ರೀಮಂತರಿಗೆ ಪರರ ವೇದನೆಯ ತಿಳಿವಳಿಕೆಯಿಲ್ಲ:
ಭೂಭಾರಕ್ಲಾಂತ ಶೇಷನ ಮೇಲೆ ಮಲಗಿಹನು ವಿಷ್ಣು ಸುಖದಿಂದ.

೨೬

ಮಾತೆಯೊಲು ಕಾಯುವುದು, ಪಿತನಂತೆ ಹಿತದಿ ಯೋಜಿಪುದು,
ಕಾಂತೆಯೊಲು ದುಃಖವನು ನೀಗಿ ಸಂತೋಷಗೊಳಿಸುವುದು,
ದಿಕ್ಕುದಿಕ್ಕಿಗೆ ಕೀರ್ತಿಯನು ಹರಡುವುದು, ಸುಖವ ತಹುದು–
ಕಲ್ಪಲತೆಯೊಲು ವಿದ್ಯೆ ಯಾವಯಾವುದನು ಸಾಧಿಸದು?

೨೭

ಶಬ್ದ ಶಾಸ್ತ್ರದ ಪಾರವಾದರೊ ಅನಂತ;
ಆಯುಷ್ಯವೋ ಸ್ವಲ್ಪ, ವಿಘ್ನಗಳು ಬಹಳ;
ಸಾರವನು ಗ್ರಹಿಸುವುದಸಾರವನು ಬಿಟ್ಟು–
ನೀರಿನೊಳು ಹಾಲ ಗ್ರಹಿಸುವ ಹಂಸದೋಲು.

೨೮

ಗುಣಿಯು ನಿರ್ಗುಣಿ ತಿಳಿಯಲಾರನು, ಗುಣಿಗೆ ಗುಣಿಯೊಳು ಮತ್ಸರ;
ಗುಣಿಗಳಾಗಿಹ, ಗುಣವ ಮೆಚ್ಚುವ ಸರಳಜನಗಳು ಸುವಿರಳ.

೨೯

ಯಾರ ನುಡಿ ರಸವತಿಯೊ ಯಾರ ಹೆಂಡತಿ ಸತಿಯೊ ಪುತ್ರವತಿಯೊ
ಯಾರ ಸಿರಿ ದಾನಕಾಗಿಹುದೊ ಆತನ ಬಾಳ್ಕೆ ಸಫಲವಹುದು.

೩೦

ದಾರಿದ್ರ್ಯವೂ ಶೋಭಿಪುದು ಧೈರ್ಯದಿಂದ;
ಶೀಲದಿಂದ ಕುರೂಪವೂ ಶೋಭಿಸುವುದು;
ಸರಳವಹ ಉಣಿಸು ಶೋಭಿಪುದು ಬಿಸಿಯಿಂದ;
ಕೀಳುಡುಗೆ ಶೋಭಿಪುದು ಶುಭ್ರತ್ವದಿಂದ.

೩೧

ಸತ್ಕುಲದಿ ಕನ್ನೆಯನು, ವಿದ್ಯೆಯಲಿ ಪುತ್ರನನು,
ವ್ಯಸನದಲಿ ಶತ್ರುವನು ಯೋಜಿಸುವುದು;
ಧರ್ಮದಲಿ ಇಷ್ಟನನು ಯೋಜಿಸುವುದು.

೩೨

ಯಾರ ಪುತ್ರನು ವಶಿಯೊ, ಹೆಂಡತಿ ವಿಧೇಯಳೋ,
ಯಾರು ತನಗಿಹ ಸಿರಿಯೊಳೇ ತೃಪ್ತನೊ–
ಅಂಥವನಿಗೀ ಇಹವೆ ಸ್ವರ್ಗವಹುದು.

೩೩

ಲೌಕಿಕರ ಸಜ್ಜನರ ಅರ್ಥವನು ಮಾತು ಅನುವರ್ತಿಸುವುದು;
ಆದ್ಯಋಷಿಗಳ ಮಾತನಾದರೋ ಅರ್ಥವೇ ಅನುಸರಿಪುದು.

೩೪

ಚಿಕ್ಕಂದಿನಲಿ ಕುಡಿದ ಅಲ್ಪ ಜಲವನು ನೆನೆದು,
ತೆಂಗುಗಳು ಶಿರದಿ ಭಾರವನು ಹೊತ್ತು
ಬದುಕಿರುವತನಕವೂ ಸಿಹಿನೀರನೀಯುವುವು
ಮನುಜರಿಗೆ: ಸಜ್ಜನರು ತಮಗೊದಗಿದ
ಉಪಕಾರವನು ಮರೆತುಬಿಡುವುದಿಲ್ಲ.

೩೫

ಪೂರ್ವಜನ್ಮದಿ ಗೈದ ಕರ್ಮವನು ದೈವವೆನ್ನುವರು;
ಅದರಿಂದ, ಪುರುಷಕಾರದ ಹೊರತು ದೈವ ಸಿದ್ಧಿಸದು.

೩೬

ಆಗಿಹೋದದ್ದಕ್ಕೆ ಶೋಕಿಸುವುದಲ್ಲ;
ಮುಂದಿನದ ಕುರಿತು ಆಲೋಚಿಸುವುದಲ್ಲ;
ಈಗ ನಡೆಯುತ್ತಿರುವ ಕಾಲಕ್ಕೆ ಹೊಂದಿ
ನಡೆದುಕೊಳ್ಳುವ ಜನಗಳೇ ವಿಚಕ್ಷಣರು.

೩೭

ಗಂಧಯುತ ತಾಂಬೂಲ, ಗಾಂಧರ್ವವಿದ್ಯೆ, ಭಾರತದ ಕಥನ,
ಇಷ್ಟಳಹ ಪತ್ನಿ, ಪ್ರಿಯಮಿತ್ರ–ದಿನ ದಿನ ಇವರು ಹೊಸತಪ್ಪರು.

೩೮

ಗ್ರಂಥಗಳಲಿಹ ವಿದ್ಯೆ, ಪರರ ಕೈಗಿತ್ತ ಧನ,
ಯುದ್ಧಕಾಲದಿ ಮನೆಗೆ ಹೋದ ಸೈನ್ಯ-
ಇವು ಮೂರು ಮನುಜರಿಗೆ ಬರಿ ವಿಡಂಬ.

೩೯

ರತ್ನಾಕರನೆ ತಂದೆ, ಲಕ್ಷ್ಮಿ ಸೋದರಿ – ಆದರೂ ಕೂಡ ಶಂಖ
ಭಿಕ್ಷೆ ಬೇಡುತ ಕೂಗಿಕೊಳ್ಳುವುದು: ಫಲವಹುದು ಭಾಗ್ಯಾನುಸಾರ.

೪೦

ವೃದ್ಧರಿಲ್ಲದ ಸಭೆಯು ಸಭೆಯಲ್ಲ, ಧರ್ಮವನು
ನುಡಿಯದಿಹ ವೃದ್ಧಜನ ವೃದ್ಧರಲ್ಲ;
ಸತ್ಯವಿಲ್ಲದ ಧರ್ಮವದು ಧರ್ಮವೇನಲ್ಲ,
ಮೋಸಮಿಶ್ರಿತ ಸತ್ಯ ಸತ್ಯವಲ್ಲ.

೪೧

ಆಗಲಾರದ್ದೆಂದಿಗೂ ಆಗುವುದೆಯಿಲ್ಲ;
ಆಗಬೇಕಾದ್ದಾಗುವುದು ಯತ್ನದಿಂದ;
ಅದೃಷ್ಟ ಯಾರಿಗಿಲ್ಲವೊ ಅವನ ಕರತಲಕೆ
ಬಂದುದೂ ಕೂಡ ಹಾಳಾಗಬಹುದು.

೪೨

ಅತಿಪರಿಚಯದ ಕತದಿ ಹುಟ್ಟುವುದವಜ್ಞೆ;
ಸತತ ಗಮನ ಅನಾದರಕೆ ಹೇತುವಹುದು:
ಮಲಯಪರ್ವತದಿ ಬೇಡಿತಿ ಚಂದನವನು
ಒಲೆಗೆ ಸೌದೆಯ ಮಾಡಿ ಉರಿಸಿಹಾಕುವಳು.

೪೩

ಶುಭವಾಡಬೇಕು, ಪ್ರಿಯವನು ಆಡಬೇಕು;
'ಒಳ್ಳೆಯದು' ಎಂದಾದರೂ ಹೇಳಬೇಕು–
ಶುಷ್ಕ ವೈರ, ವಿವಾದ ಯಾರೊಳೂ ಬೇಡ.

೪೪

ಸಿರಿ ಕಳೆದುಹೋಗೆ, ಈ ದೇಹ ಮತ್ತದನು ತರಬಹುದು;
ದೇಹ ಗತಿಸಲು, ಅದನು ಮತ್ತೆ ಐಸಿರಿ ತರುವುದರಿದು.

೪೫

ಶತ್ರುವಾದರು ಮನೆಗೆ ಬಂದವನಿಗಾತಿಥ್ಯ ಉಚಿತ:
ಕಡಿಯಬಂದವನಿಗೂ ಮರ ತನ್ನ ನೆರಳ ಕೊಡದಿರದು.

೪೬

ಹೊನ್ನ ಜಿಂಕೆಯ ಸೃಷ್ಟಿಯಿಲ್ಲ, ಅದ ಕಂಡವರು
ಕೇಳಿದವರಿಲ್ಲ; ಆದರು ರಾಘವನಿಗೆ
ಅದರ ಮೇಲಾಸೆ ಹುಟ್ಟಿತು – ನಾಶಕಾಲದಲಿ
ವಿಪರೀತ ಬುದ್ಧಿ ಹುಟ್ಟುವುದು ಜನಗಳಿಗೆ.

೪೭

ಒಬ್ಬ ಮಾಡಿದ್ದನ್ನು ನೋಡಿ ಇನ್ನೊಬ್ಬನೂ
ಮಾಡುವನು ನೀಚಕಾರ್ಯವನು:
ಈ ಪ್ರಪಂಚ ಗತಾನುಗತಿಕವಾಗಿಹುದಷ್ಟೆ,
ಪಾರಮಾರ್ಥಿಕವಾದುದಲ್ಲ.

೪೮

ವಜ್ರಕಿಂತಲು ಕಠಿಣ, ಹೂವಿಗಿಂತಲು ಮೃದುವು
ಲೋಕೋತ್ತರರ ಮನಗಳು;
ಅವನರಿಯಬಲ್ಲರಾರು?

೪೯

ಗುಣಸಮೂಹದೊಳೊಂದು ದೋಷವಡಗುವುದು:
ಇಂದುಕಿರಣಗಳಲಿ ಕಳಂಕವೆಂತಂತು.

೫೦

ಪರರಿಗೂ ಕೊಡದೆ ತಾನೂ ತಿನ್ನದಿರುವವನಿಗೇನು ಧನದಿಂದ?
ಶತ್ರುಗಳ ನಿಗ್ರಹಿಸದಿರುವವನಿಗೇನು ಫಲ ತನ್ನ ಬಲದಿಂದ?
ಧರ್ಮವನ್ನಾಚರಿಸದವನಿಗೇನುಪಯೋಗ ಶಾಸ್ತ್ರಂಗಳಿಂದ?
ಇಂದ್ರಿಯಗಳನು ಜಯಿಸಲಾರದವನಿಗೆ ಏನು ಫಲ ಆತ್ಮದಿಂದ?

೫೧

ಗುಣಗಳು ಗುಣಜ್ಞರಿಗೆ ಗುಣಗಳೇ ಹೌದು;
ಗುಣವಿಲ್ಲದವರಿಗವು ದೋಷವಾಗುವುವು:
ಕುಡಿವುದಕೆ ತಕ್ಕ ನೀರಿನ ನದಿಗಳಿಹವು;
ಕಡಲ ಸೇರಿದ ಮೇಲೆ ಕುಡಿಯೆ ಸಲ್ಲವವು.

೫೨

ಪರರಿಗುಪದೇಶಿಸುವ ಪಾಂಡಿತ್ಯವೆಲ್ಲರಿಗು ಸುಕರ;
ಧರ್ಮಾಚರಣೆ ಮಾತ್ರ ಎಲ್ಲೊ ಒಬ್ಬೊಬ್ಬ ಶ್ರೇಷ್ಠನಲಿ.

೫೩

ಗ್ರಂಥಕೋಟಿಗಳಲ್ಲಿ ಹೇಳಿರುವುದನು ಅರ್ಧ ಶ್ಲೋಕದಲ್ಲೊರೆವೆ:
ಅನ್ಯೋಪಕಾರವೇ ಪುಣ್ಯಕರ, ಪರಪೀಡನವೆ ಪಾಪಕಾರಿ.

೫೪

ದುಃಖಗಳು ಎಂತಂತೆ ಸುಖಗಳೂ ಬರಬಹುದು ಪ್ರಾಣಿಗಳಿಗೆ
ಅನಿರೀಕ್ಷಿತವೆ ಆಗಿ; ವಿಧಿಯೆಲ್ಲವನು ಮೀರಿ ನಿಂತಿರುವುದು.

೫೫

ಉದ್ಯೋಗಶೀಲನಹ ಪುರುಷನಿಗೆ ಒಲಿಯುವಳು ಲಕ್ಷ್ಮಿ;
ದೈವದಿಂ ಬಹುದೆಂದು ಹೇಳುವುದು ಕಾಪುರುಷವಚನ:
ದೈವವನು ಮೆಟ್ಟುತೆ ಸ್ವಶಕ್ತಿಯೊಳು ಪೌರುಷವನೆಸಗು;
ಯತ್ನಿಸಿಯು ಸಿದ್ಧಿಸದೆ ಹೋದರೇನುಂಟಲ್ಲಿ ದೋಷ?

೫೬

ಹಳೆಯದೆಂದೇ ಎಲ್ಲವೂ ಒಳ್ಳಿತಲ್ಲ;
ಹೊಸತೆಂದ ಮಾತ್ರಕ್ಕೆ ಕೃತಿ ದುಷ್ಟವಲ್ಲ;
ಸಜ್ಜನರು ಪರಿಕಿಸಿಯೆ ಒಂದನಾಯುವರು;
ಮೂಢನಾದರೊ ಪರರ ಮತವ ಹಿಡಿಯುವನು

2

೫೭

ಪ್ರಲಪಿಸುವ ಉನ್ಮತ್ತ, ಹರಟುತಿಹ ಬಾಲ-
ಯಾರಾದರೇನಂತೆ, ಎಲ್ಲ ಕಡೆಯಿಂದ
ಸಾರವನು ತೆಗೆದುಕೊಳ್ಳುವುದು, ಕಲ್ಲಿಂದ
ಚಿನ್ನವನು ತೆಗೆದುಕೊಳ್ಳುವ ತೆರದಿ ಮನುಜ.

೫೮

ಅಧಮಜನ ಕಾರ್ಯವನು ಆರಂಭಿಸುವುದಿಲ್ಲ ವಿಘ್ನಭಯದಿಂದ;
ಮಧ್ಯಮರು ಆರಂಭಿಸುವರು, ವಿಘ್ನಕೆ ಸಿಲುಕಿ ಕೈಬಿಡುವರದನು;
ಉತ್ತಮರೊ ಮೇಲಿಂದಮೇಲೆ ವಿಘ್ನಗಳು ಅಪ್ಪಳಿಸಿದರು ಕೂಡ
ಪ್ರಾರಂಭಿಸಿದ ಕಾರ್ಯವನು ಮಧ್ಯದಲಿ ತೊರೆದು ವಿರಮಿಸುವುದಿಲ್ಲ.

೫೯

ಹುಲಿಯಾನೆಗಳಿಗೆ ಬೀಡಾದ ಕಾಡಾದರೂ ಲೇಸು;
ಮರದ ಕೆಳಗಡೆ ವಾಸ, ವನ್ಯಫಲಜಲದುಣಿಸು ಲೇಸು;
ಹುಲ್ಲ ಹಾಸಿಗೆ, ನಾರಿನುಡುಗೆಯಾದರು ಕೂಡ ಲೇಸು–
ಬಂಧುಗಳ ನಡುವೆ ಧನಹೀನ ಜೀವಿತ ಮಾತ್ರ ಬೇಡ.

೬೦

ವಿದ್ಯೆ ವಿನಯವನೀಯುವುದು, ಆ ವಿನಯದಿಂದ ಯೋಗ್ಯತೆಯು ಬಹುದು,
ಯೋಗ್ಯತ್ವದಿಂದ ಧನ, ಧನದಿಂದ ಧರ್ಮ, ಆ ಧರ್ಮದಿಂ ಸೌಖ್ಯ.

೬೧

ಗಗನದಲಿ ಸಂಚರಿಸುವವನು, ಕಲ್ಮಷಗಳನು
ನಾಶಗೈವವನು, ಸಾವಿರ ಕಿರಣಗಳನು
ಧರಿಸಿ ಗ್ರಹಗಳ ನಡುವೆ ಸಂಚಾರಗೈವವನು,
ಆ ಸೂರ್ಯ, ಅಂತೆಯೇ ಚಂದ್ರ ಕೂಡ
ವಿಧಿಯೋಗದಿಂದ ರಾಹುಗ್ರಸ್ತರಾಗುವರು–
ಹಣೆಯ ಬರಹವನಳಿಸಬಲ್ಲರಾರು?

೬೨

ನನ್ನದಿದು ಬೇರೆಯವನದು ಎಂಬ ಗಣನೆ ಲಘುಚೇತಸರಿಗೆ;
ವಸುಧೆಯೆಲ್ಲ ಕುಟುಂಬವಾಗಿಹುದುದಾತಚರಿತರ ಪಾಲಿಗೆ.

೬೩

ಅಜ್ಞನಾದವನ ಸುಲಭದಲಿ ಮೆಚ್ಚಿಸಬಹುದು,
ಜ್ಞಾನಿಯನು ಮೆಚ್ಚಿಪುದು ಬಹಳ ಸುಲಭ;
ಜ್ಞಾನಲವದಿಂದ ಗರ್ವಿತನಾದ ಮನುಜನನು
ಮೆಚ್ಚಿಸಲು ಬ್ರಹ್ಮನಿಗು ಸಾಧ್ಯವಿಲ್ಲ.

೬೪

ಉಪಕಾರ ಮಾಡಿದವರಿಗೆ ಒಳ್ಪುದೋರಿದರೆ
ಆ ಒಳ್ಪಿನಲ್ಲೇನು ಗುಣವಿರುವುದು?
ಅಪಕಾರಗೈದವನಿಗಾರು ಒಳ್ಳಿದನವನೆ
ಒಳ್ಳೆಯವನೆಂದು ಸಜ್ಜನ ನುತಿಪರು.

೬೫

ಯಾರಲ್ಲಿ ಹಣವಿಹುದೊ ಅವನೇ ಕುಲೀನ,
ಅವನೆ ಪಂಡಿತ, ಎಲ್ಲ ಬಲ್ಲವ, ಗುಣಜ್ಞ,
ಅವನೆ ವಾಕ್ಕೋವಿದನು, ಅವನೆ ಕಡು ಚೆಲುವ-
ಹಣವನೇ ಆಶ್ರಯಿಸಿಹವು ಗುಣಗಳೆಲ್ಲ.

೬೬

ರವಿಶಶಿಗಳಿಗೆ ಕೂಡ ಗ್ರಹಪೀಡೆಯುಂಟು;
ಗಜಭುಜಂಗಮಗಳಿಗೆ ಕೂಡ ಸೆರೆಯುಂಟು;
ಬುದ್ಧಿವಂತರಿಗೆ ದಾರಿದ್ರ್ಯ-ಇದ ನೋಡಿ,
ತಿಳಿಯುವೆನು ವಿಧಿಯೆ ಬಹು ಬಲಶಾಲಿಯೆಂದು.

೬೭

ನಿಧಿ ಬೇರೆಯಿಲ್ಲ ದಾನಕ್ಕೆ ಸಮನಾಗಿ,
ರಿಪು ಬೇರೆಯಿಲ್ಲ ಲೋಭಕ್ಕೆ ಸಮನಾಗಿ,

ಆಭರಣವಿಲ್ಲ ಶೀಲಕ್ಕೆ ಸಮನಾಗಿ,
ಸಂತೋಷಸಮವಾದ ಧನವಿಲ್ಲ ಜಗದಿ.

೧೮

ಗಾಯಗಳ ಮೇಲೆಯೇ ಬೀಳುವುವು ಪೆಟ್ಟು ಹೆಚ್ಚಾಗಿ;
ಅನ್ನಕ್ಕೆ ಕೊರತೆಯಾದಾಗಲೇ ಹೆಚ್ಚು ಜಠರಾಗ್ನಿ;
ಆಪತ್ತುಗಳ ನಡುವೆಯೇ ಹುಟ್ಟಿಕೊಳ್ಳುವುದು ವೈರ-
ಇಂತೆಲ್ಲ ನರರಿಗಾಗುವುದು ವಿಧಿ ಪ್ರತಿಕೂಲವಾಗೆ.

೧೯

ಪಡೆಯಬೇಕಾದುದನು ಪಡೆಯುವನು ಮನುಜ;
ಅದನು ಮೀರುವುದರಿದು ದೈವವೂ ಕೂಡ:
ಅದರಿಂದ ವ್ಯಥೆ ಬೇಡ, ವಿಸ್ಮಯವು ಬೇಡ;
ನಮ್ಮದೆಂದಿಗು ಪರರದಾಗುವುದಶಕ್ಯ.

೨೦

ಮನದೊಳು ವಿಷಾದವನು ತಳೆಯಬಾರದು, ಅದುವೆ ದೋಷಯುತವಹುದು;
ಕೊಲುವುದು ವಿಷಾದ ನರನನು, ಕ್ರುದ್ಧ ಸರ್ಪ ಬಾಲಕನನೆಂತಂತು.

೨೧

ಮಂತ್ರ ತೀರ್ಥ ದ್ವಿಜ ದೇವ ದೈವಜ್ಞ ಭೇಷಜ ಗುರುಗಳಲಿ
ಎಂತು ಭಾವನೆಯೊ ಅಂತು ಸಿದ್ಧಿ ನರನಿಗೆ ದೊರೆಕೊಳ್ಳುವುದು.

೨೨

ರಕ್ಷಣಾರಹಿತವಾದುದು ದೈವದಿಂದ ರಕ್ಷಣೆಗೊಳುವುದು;
ಯಾವುದು ಸುರಕ್ಷಿತವೊ ಅದು ದೈವಹತವಾಗಿ ನಾಶವಹುದು:
ವನವಿಸರ್ಜಿತನಹ ಅನಾಥನೂ ಬದುಕಿಕೊಳ್ಳುವುದು ಉಂಟು;
ಎಷ್ಟೇ ಪ್ರಯತ್ನಿಸಿದರೂ, ಮನೆಯೊಳಿರುವವನು ಅಳಿವುದುಂಟು.

೨೩

ಪುರುಷಕಾರವೆ ಕ್ಷೇತ್ರ, ದೈವವೇ ಬೀಜ;
ಕ್ಷೇತ್ರ-ಬೀಜ ಸಮಾಗಮದಿ ಬೆಳೆಯ ಹುಲುಸು.

೭೪

ಏನನಾಚರಿಸುವನೊ ಶ್ರೇಷ್ಠನಾದವನು,
ಅದನೆ ತಾನಾಚರಿಸುವರು ಇತರ ಜನರು;
ಏನನು ಪ್ರಮಾಣವೆಂದವನು ಮಾಡುವನೊ
ಅದನೆ ಅನುಸರಿಸಿ ನಡೆಯುವುದು ಈ ಲೋಕ.

೭೫

ಕಾಡಿನಲಿ ಮೃಗಮಾಂಸವನು ತಿನುವ ಕೇಸರಿಯು
ಹಸಿದರೂ ಹುಲ್ಲು ತಿನ್ನುವುದೆಯಿಲ್ಲ;
ಅಂತೆಯೆ ಕುಲೀನಜನ ವ್ಯಸನಾರ್ತರಾದರೂ
ನೀತಿಮಾರ್ಗವನು ಮೀರುವುದೆಯಿಲ್ಲ.

೭೬

ಕೆಲವೊಮ್ಮೆ ನೀರು ಆಗಸದಿಂದ ಬೀಳುವುದು,
ಅಗೆಯೆ ಪಾತಾಳದಿಂದಲು ಬರುವುದು;
ಯೋಚನೆಗೆ ನಿಲುಕದಿಹ ದೈವವೇ ಬಲಶಾಲಿ,
ಬಲವುಳ್ಳುದೇನಲ್ಲ ಪುರುಷಕಾರ.

೭೭

ಎಲ್ಲಿ ಬೇಕಾದರೂ ಹೋಗಬಲ್ಲವನೇಕೆ
ಕೆಡಬೇಕು ತನ್ನ ನಾಡಿನ ಮೋಹದಿ?–
'ಅಪ್ಪ ತೋಡಿದ ಬಾವಿ' ಎಂದು ಹೇಳುತ ಉಪ್ಪು-
ನೀರನೇ ಕುಡಿಯುವರು ಕಾಪುರುಷರು

೭೮

ಪಕ್ವಫಲಗಳಿಗೆ ಪತನದ ಭಯದ ಹೊರತನ್ಯ ಭೀತಿಯೇನಿಲ್ಲ:
ಅಂತೆಯೇ, ಹುಟ್ಟಿದವರಿಗೆ ಮೃತ್ಯುಭಯದ ಹೊರತನ್ಯ ಭಯವಿಲ್ಲ.

೭೯

ದನಗಾಹಿಯಂತೆ ದೇವರು ದೊಣ್ಣೆಯನು ಹಿಡಿದು ಕಾವುದಿಲ್ಲ;
ಕಾಯಬಯಸುವ ಜನರಿಗೀಯುವನು ಸೂಕ್ತವಹ ಬುದ್ಧಿಬಲವ.

೮೦

ತರ್ಕಕೆ ಪ್ರತಿಷ್ಠೆ ಹೋಗಿದೆ, ಶ್ರುತಿಗಳೋ ಭಿನ್ನ,
ಯಾವೊಂದು ಋಷಿಮತ ಪ್ರಮಾಣವಲ್ಲ,
ಅಡಗಿಹೋಗಿದೆ ಧರ್ಮತತ್ವ ಗುಹೆಯುದರದಲಿ–
ದೊಡ್ಡವರು ಹೋದ ದಾರಿಯೆ ದಾರಿಯು.

೮೧

ಸಂಪತ್ತಿನಲಿ ವಿಪತ್ತಿನಲಿ ದೊಡ್ಡವರೊಂದೆ ತೆರನಾಗಿರುವರು:
ರವಿ ಹುಟ್ಟುವಾಗಲೂ ಕೆಂಪು, ಅಂತೆಯೆ ಮುಳುಗುವಾಗಲೂ ಕೆಂಪು.

೮೨

ತಾನೇ ಮಹೇಶ, ಮಾವನೊ ನಗೇಶ.
ಮಿತ್ರನೊ ಧನೇಶ, ತನಯನೊ ಗಣೇಶ–
ಆದರೂ ಶಂಭುವಿಗೆ ಗತಿ ತಿರುಪೆಯೊಂದೆ:
ಬಲಶಾಲಿಯಹುದು ಕೇವಲ ಈಶ್ವರೇಚ್ಛೆ.

೮೩

ಸರ್ಪಗಳು ಗಾಳಿಯನೆ ಕುಡಿಯುವುವು, ಆದರೂ ದೌರ್ಬಲ್ಯವಿಲ್ಲ;
ಒಣಹುಲ್ಲ ತಿನ್ನುವುವು ಆನೆಗಳು, ಆದರೂ ಬಲಶಾಲಿಯಹವು;
ಬರಿ ಗೆಡ್ಡೆ ಗೆಣಸುಗಳನೇ ತಿಂದು ಮುನಿವರರು ಕಾಲಹಾಕುವರು:
ಸಂತೋಷವೊಂದೆ ಮಾನವನ ಪಾಲಿಗೆ ಪರಮನಿಧಿಯಾಗಿರುವುದು.

೮೪

ಯಾವಾಗಲೂ ಪ್ರಿಯವ ನುಡಿವ ಜನ ಸಿಕ್ಕುವರು ಸುಲಭವಾಗಿ;
ಪ್ರಿಯವಲ್ಲದಿಹ ಪಥ್ಯವನು ನುಡಿವ, ಆಲಿಸುವ ಜನ ದುರ್ಲಭ.

೮೫

ಧರ್ಮಾರ್ಥಗಳ ತೊರೆದು ಕಾಮವನು ಸೇವಿಸುವ
ನರ, ಮರದ ತುದಿಯಲ್ಲಿ ನಿದ್ದೆಹೋದ
ಮನುಜನೊಲು ಬಿದ್ದು ಎಚ್ಚರಗೊಳುವನು

೮೭

ವಾಯುವಾಗಲಿ ಸೂರ್ಯಕರಗಳಾಗಲಿ ಎಲ್ಲಿ ಹೊಗಲಾರವೊ,
ಬುದ್ಧಿವಂತರ ಬುದ್ಧಿ ಅಲ್ಲಿಯೂ ಹೊಗಲು ಬಲ್ಲುದು ಸಂತತ.

೮೭

ಸಂತೋಷನಾಶಕವಾಗಿಯೆ ಅಕಸ್ಮಾತ್ ಧನಾಗಮನವಾಗುವುದು:
ಅತಿಯಾದ ಮಳೆನೀರು ಸ್ಥಿರವಲ್ಲ, ಕೆರೆಕಟ್ಟೆಗಳನೊಡೆಯಲಷ್ಟೆ.

೮೮

ದೊಡ್ಡವರ ದೊಡ್ಡತನ ಏನನೂ ಯಾಚಿಸದೆ ಇರುವುದರೊಳು:
ಬಲಿಯ ಬೇಡುವ ಸಮಯದಲ್ಲಿ ಹರಿ ಕೂಡ ವಾಮನನಾದನು.

೮೯

ಯಾವಾತ ಓದುವನೊ ಬರೆಯುವನೊ ಕೇಳುವನೊ ಪಂಡಿತರ-
ನಾಶ್ರಯಿಪನೊ,
ಅವನ ಬುದ್ಧಿ ವಿಕಾಸಗೊಳ್ಳುವುದು ಕಮಲ ರವಿಕರಗಳಿಂದರಳುವಂತೆ.

೯೦

ಎಲ್ಲೆಲ್ಲಿಯೂ ಫಲಿಸುವುದು ದೈವ, ವಿದ್ಯೆ ಪೌರುಷಗಳಲ್ಲ:
ಕಡಲ ಕಡೆಹದಿ ಹರಿಗೆ ಲಕ್ಷ್ಮಿ ಸಿಕ್ಕಿದಳು, ವಿಷ ಹರನಿಗಾಯ್ತು.

೯೧

ಎಂತಾದರೂ ಸರಿಯೆ, ಯಾರಿಗಾದರು ಸರಿಯೆ, ಪ್ರಾಜ್ಞನಾದವನು
ಸಂತೋಷವನ್ನುಂಟುಮಾಡುವುದು; ಅದುವೆ ಈಶ್ವರಪೂಜೆಯಹುದು.

೯೨

ಅನ್ಯಾಯದಿಂದ ಗಳಿಸಿದ ವಿತ್ತ ಬಾಳುವುದು ಹತ್ತು ವರ್ಷ;
ಹನ್ನೊಂದನೆಯ ವರ್ಷದಲ್ಲಿ ಹಾಳಾಗುವುದು ಮೂಲಸಹಿತ.

೯೩

ಹೆಣ್ಣು ಪಾರಿವ ಗಂಡನಿಗೆ ಹೇಳಿದುದು: "ನಾಥ,
ನಮಗೀಗ ಒದಗಿದುದು ಅಂತ್ಯಕಾಲ–

ಕೆಳಗೆ ಬಿಲ್ಲಿಗೆ ಬಾಣ ಹೂಡಿರುವನದೊ ಬೇಡ,
ಹೊಂಚಿ ಸುತ್ತುತ್ತಿಹುದು ಮೇಲೆ ಗಿಡುಗ."
ಹೀಗಿರಲು, ಬೇಡನನು ಹಾವೊಂದು ಕಚ್ಚಿದುದು,
ಗುರಿತಪ್ಪಿದಂಬು ಗಿಡುಗನ ಕೊಂದುದು;
ಬೇಡ, ಗಿಡುಗರು ಸೇರಿದರು ಯಮನ ಸದನವನು–
ಆಹ! ಏನು ವಿಚಿತ್ರ ದೈವಗತಿಯು!

೯೪

ಉಡುಪಿನಿಂದೇನೆಂದು ಚರ್ಚಿಸುವುದಲ್ತು;
ಯೋಗ್ಯತೆಗೆ ಉಡುಪು ಪ್ರಧಾನವೇ ಅಹುದು:
ಪೀತಾಂಬರಗೆ ಮಗಳನಿತ್ತ ಸಾಗರನು
ಆ ದಿಗಂಬರ ಶಿವಗೆ ವಿಷವ ನೀಡಿದನು.

೯೫

ಸಂಸಾರದಲಿ ಸಿಕ್ಕಿಬಿದ್ದವನ ಕುಶಲವನು ಏನು ಕೇಳುವುದು?–
ಅಗ್ನಿಪತಿತನಿಗೇಕೆ 'ಸುಟ್ಟುಹೋದೆಯೊ ಇಲ್ಲವೋ' ಎಂಬ ಪ್ರಶ್ನೆ?

೯೬

ಗೌರವ ಬರುವುದು ದಾನದಿಂದ, ಧನಸಂಗ್ರಹದಿಂದಲ್ಲ:
ಮಳೆಮೋಡಗಳಿರುವುದು ಎತ್ತರದಲಿ, ಪಯೋಧಿಯೋ ಕೆಳಗೆ.

೯೭

ಕಾಲ ಬಾರದ ಮುನ್ನ ಜಂತು ಸಾಯದು ನೂರು ಬಾಣ ನಾಟಿದರೂ:
ಕಾಲ ಬಂದಾಗ ದರ್ಭೆಯ ಮುಳ್ಳು ಚುಚ್ಚಿದರು ಬದುಕಲಾರದದು.

೯೮

ಅನುಕೂಲೆಯಾದವಳು, ವಿಮಲಾಂಗಿಯಾದವಳು,
ಕುಲಜೆಯಾದವಳಂತು ಕುಶಲೆಯಾದವಳು.
ಶೀಲಸಂಪನ್ನೆ – ಈ ಐದು 'ಲ'ಕ್ಷಣಗಳ ಸತಿ
ಪುರುಷಪುಣ್ಯೋದಯದಿ ದೊರಕಬಹುದು.

೯೯

ನಾಲಗೆಯ ಮೇಲಿಹಳು ಲಕ್ಷ್ಮಿ, ನಾಲಗೆಯಿಂದ ಮಿತ್ರಬಾಂಧವರು,
ನಾಲಗೆಯ ಮೂಲಕವೆ ಬಂಧನವು, ಮರಣ ನಾಲಗೆಯಿಂದ ಬಹುದು.

೧೦೦

ಹಲ್ಲುಗಳು ಕಡಿದುದರ ರುಚಿಯನನುಭವಿಸುವುದು ರಸನೆ;
ಇದು ಸಜ್ಜನರ ರೀತಿ: ಕ್ಲೇಶಗೊಳುವರು ಪರರ ಹಿತಕೆ.

೧೦೧

ಇತರರನು ದೂಷಿಸುವ ಸಂದರ್ಭದಲಿ ಮೂಕ,
ಪರಸತಿಯರನು ನೋಡುವಲ್ಲಿ ಕುರುಡ,
ಪರರ ಧನವನು ಕದಿವ ಸಂದರ್ಭದಲಿ ಹೆಳವ–
ಜಗದಿ ಜಯಿಸುವನು ಇಂತಹ ಮಹಾಪುರುಷ.

೧೦೨

ಮೃದುವಾಗಿರುವ, ಬಾಗಿರುವ ಹುಲ್ಲುಕಡ್ಡಿಗಳ
ಕಿತ್ತುಹಾಕಲು ಇಷ್ಟಪಡದು ಬಿರುಗಾಳಿ;
ಅದು ಬಾಧಿಸುವುದು ಹೆಮ್ಮರಗಳನೆ: ದೊಡ್ಡವರು
ದೊಡ್ಡವರೊಳೇ ತೋರುವರು ವಿಕ್ರಮವನು.

೧೦೩

ಕುಲದ ಹಿತಕಾಗಿ ವ್ಯಕ್ತಿಯನು ಬಿಡಬೇಕು;
ಗ್ರಾಮಹಿತಕಾಗಿ ಆ ಕುಲವ ಬಿಡಬೇಕು;
ಜನಪದದ ಹಿತಕಾಗಿ ಗ್ರಾಮ ಬಿಡಬೇಕು;
ಆತ್ಮಹಿತಕಾಗಿ ಪೃಥ್ವಿಯನು ಬಿಡಬೇಕು.

೧೦೪

ಲಂಕೆಯನು ಗೆಲಬೇಕು, ಕಾಲಿನಲಿ ಜಲಧಿಯನು ದಾಟಬೇಕು;
ವೈರಿಯೋ ಲಂಕೇಶ, ರಣದಲಿ ಸಹಾಯವೋ ಕಪಿಸಮೂಹ–

ಹೀಗಿದ್ದರೂ ರಾಮ ಸಕಲ ರಾಕ್ಷಸಕುಲವ ಸಂಹರಿಸಿದ:
ದೊಡ್ಡವರ ಸಿದ್ಧಿ ಸತ್ತ್ವದಲಿಹುದು, ಉಪಕರಣಗಳಲಿ ಅಲ್ಲ.

೧೦೫

ಸಜ್ಜನರು ಆಪತ್ತಿನಲಿ ಸಿಲುಕಿದರು ಕೂಡ
ತಮ್ಮ ಸ್ವಭಾವವನು ಬಿಡುವುದಿಲ್ಲ:
ಕರ್ಪೂರ ಪಾವಕಸ್ಪರ್ಶವನು ಪಡೆದರೂ
ಹೊರಸೂಸುವುದು ಹೆಚ್ಚು ಸೌರಭವನು.

೧೦೬

ರಾಷ್ಟ್ರದ ಚಿತ್ತ, ಕೃಪಣನ ವಿತ್ತ, ದುರ್ಜನ ಮನುಜರ ಮನೋರಥ,
ಸ್ತ್ರೀಯರ ಚರಿತ, ಪುರುಷನ ಭಾಗ್ಯ – ಅರಿಯರು ದೇವರು, ನರರೆಂತು?

೧೦೭

ಕುದುರೆಯಿಂದೊದೆಸಿಕೊಳುವುದು ಕೂಡ ಶ್ಲಾಘ್ಯ.
ಕತ್ತೆಯನು ಹತ್ತುವುದು ಮಾತ್ರ ಅಶ್ಲಾಘ್ಯ:
ವಿದ್ವಾಂಸರೊಡನೆ ಸ್ಪರ್ಧಿಸುವುದೂ ಯುಕ್ತ,
ಮೂರ್ಖಜನರೊಡನೆ ಕೆಳೆ ಬೆಳೆಸುವುದಯುಕ್ತ.

೧೦೮

ಯುದ್ಧದಲಿ ಭೃತ್ಯರನು, ಸಂಕಟದ ಸಮಯದಲಿ ಬಂಧುಗಳನು,
ಆಪತ್ತಿನಲಿ ಮಿತ್ರರನು, ಬಡತನದಿ ಸತಿಯನರಿಯಬಹುದು.

೧೦೯

ಹೊನ್ನ ತಾವರೆಗಳನು ನಿರ್ಮಿಸುವ ಶಿಲ್ಪಿಜನರುಂಟು;
ಸೌರಭದ ನಿರ್ಮಾಣದಲಿ ಚತುರನೊಬ್ಬನೇ: ಬ್ರಹ್ಮ.

೧೧೦

ವನದಿ ಕೇಸರಿಗೆ ಅಭಿಷೇಕ ಸಂಸ್ಕಾರಗಳನೆಸಗಿದವರಿಲ್ಲ;
ತನ್ನ ವಿಕ್ರಮದಿಂದ ಪಡೆದ ಸತ್ತ್ವದಿನದಕೆ ಮೃಗರಾಜಪದವಿ.

೧೧೧

ಸಜ್ಜನರು ಸಹಜವಾಗಿಯೆ ನುಡಿದ ಮಾತು ಕಲ್ಲಿನಲಿ ಬರೆದಂತೆ;
ದುರ್ಜನರು ಶಪಥಪೂರ್ವಕವಾಗಿ ನುಡಿದ ನುಡಿ ಜಲದಿ ಬರೆದಂತೆ.

೧೧೨

ದುಷ್ಟ ಕೆಟ್ಟುದನಾಚರಿಸುವನು; ಅದರ ಫಲ ಸಜ್ಜನರಿಗೆ:
ಸೀತೆಯನು ಕದ್ದೊಯ್ದ ರಾವಣ; ಕಡಲಿಗಾಯಿತು ಬಂಧನ.

೧೧೩

ಮಂತ್ರವಲ್ಲದ ಅಕ್ಷರಗಳಿಲ್ಲ, ಮದ್ದಲ್ಲದಿಹ ಬೇರ್ಗಳಿಲ್ಲ,
ಯೋಗ್ಯರಲ್ಲದ ಪುರುಷರಿಲ್ಲ – ಯೋಜಿಸುವವರೆ ಬಹಳ ದುರ್ಲಭರು.

೧೧೪

ಪರರ ಹಿತಕಾಗಿ ಸ್ವಾರ್ಥವನು ತೊರೆಯುವ ಜನರು ಸತ್ಪುರುಷರು;
ಸ್ವಾರ್ಥ ಕೆಡದಂತೆ ಪರಹಿತವ ಸಾಧಿಸುವವರು ಸಾಮಾನ್ಯರು;
ಪರಹಿತವ ಸ್ವಾರ್ಥಕೋಸುಗ ಬೇಳುವವರು ನರದನುಜರಹುದು;
ಪರಹಿತವ ವ್ಯರ್ಥವಾಗಿಯೆ ಕೆಡಿಸುವವರಿಗೇನೆನ್ನಬೇಕು?

೧೧೫

ಅಲ್ಪಸಾರವನುಳ್ಳ ವಸ್ತುಗಳ ಒಕ್ಕೂಟ ಕಾರ್ಯ ಸಾಧಿಪುದು;
ಹಗ್ಗವಾದರೆ ಹುಲ್ಲು ಕೂಡ ಮದಗಜಗಳನು ಕಟ್ಟಿಹಾಕುವುದು.

೧೧೬

ವಿದ್ವಜ್ಜನರೆ ಬಲ್ಲರಹುದು ವಿದ್ವಜ್ಜನರ ಶ್ರಮವ:
ತೀಪ್ರಸಹ ಹೆರಿಗೆಬೇನೆಯ ಬಂಜೆಯೆಂತರಿಯಬಹುದು?

೧೧೭

ವಿದ್ಯೆಯಿಂದ ಅಲಂಕೃತಿಯ ಪಡೆದರೂ ದುಷ್ಟಮನುಜನನು ಪರಿಹರಿಸಬೇಕು:
ರತ್ನಭೂಷಿತವಾದರೂ ಸರ್ಪ ಹೆದರಿಕೆಯನುಂಟುಮಾಡದೆ ಇರುವುದೇನು?

೧೧೮

ಧನಧಾನ್ಯ ಪಡೆವಲ್ಲಿ, ವಿದ್ಯೆಯನು ಕಲಿವಲ್ಲಿ,
ಆಚಾರ ವ್ಯವಹಾರ ಗೈಯುವಲ್ಲಿ
ಸುಖಿಯಾಗುವುದು ನಾಚಿಕೆಯನು ತೊರೆದು.

೧೧೯

ಗುಣಗಳಿಗೆ ಯತ್ನವನು ಮಾಡುವುದು; ಆಟೋಪದಿಂದೇನು ಫಲವು?–
ಹಾಲು ಕರೆಯದ ಹಸುವು ಮಾರಿಹೋಗದು ಬರಿಯ ಗಂಟೆಯಿಂದಾಗಿ.

೧೨೦

ಬುದ್ಧಿವಂತನು ಬಾಲನಿಂದಾದರೂ ಸರಿಯೆ
ಗ್ರಹಿಸುವುದು ಯುಕ್ತಿಯುಕ್ತವನು:
ಸೂರ್ಯನಿಗೆ ವಿಷಯವಾಗದ ವಸ್ತುನಿವಹವನು
ದೀಪ ಬೆಳಗುವುದಿಲ್ಲವೇನು?

೧೨೧

ಪ್ರಾಯಶಃ ಸ್ಫುಟವಾಗಿ ಬೆಳಗುವುದು ಸತ್ತ್ವವರ ಹಿರಿಮೆ:
ಅಗರುಚಕ್ಕೆಯ ಪರಿಮಳವು ಹೊಮ್ಮುವುದು ಬೆಂಕಿ ಸುಡಲು.

೧೨೨

ದುಃಖಾನುಭವವಾದ ಬಳಿಕ ಬಹ ಸುಖ ಸ್ವಲ್ಪವಾದರೂ ಮಿಗಿಲು:
ಕಾಷಾಯವನು ಕುಡಿದ ನಾಲಗೆಗೆ ಬಹಳ ಸವಿಯಾಗುವುದು ನೀರು.

೧೨೩

ಸಂಪತ್ತು ತುಂಬಿದವರಿಗೆ ಪಂಡಿತರಿಗೆ ಕೆಳೆ ಬೇಕು:
ಸಾಗರನು ಪರಿಪೂರ್ಣನಾದರೂ ಶಶಿಯುದಯ ಬೇಕು

೧೨೪

ವಿದ್ಯೆಯನು ಪರಿಕಿಪುದು; ಅಂಬರಾಡಂಬರದೊಳೇನು?–
ಶಂಭು ಅಂಬರಹೀನನಾದರೂ ಸರ್ವಜ್ಞನಹುದು.

೧೨೫

ಯುಕ್ತಿಯುತವಹ ಮಾತು ಬಾಲಕನದಾದರೂ ಉಪಯುಕ್ತವಹುದು;
ಯುಕ್ತಿಯಿಲ್ಲದ ಮಾತು ಬ್ರಹ್ಮನದೆ ಆದರೂ ಅದು ತ್ಯಾಜ್ಯವಹುದು.

೧೨೬

ಬೆಲೆಯುಳ್ಳದಾದರೂ ಮಾಣಿಕ್ಯ ಬಯಸುವುದು ಹೊನ್ನಿನಾಶ್ರಯವ:
ಆಶ್ರಯವನುಳಿದು ಪಂಡಿತರು ಸ್ತ್ರೀಯರು ಬಳ್ಳಿಗಳಿಗಿಲ್ಲ ಶೋಭೆ.

೧೨೭

ಸಾಕ್ಷರರು ವಿಪರೀತರಾದರೆ ರಾಕ್ಷಸರೆಯಹರು;
ಸರಸಜನ ವಿಪರೀತರಾದರೆ ಸರಸತೆಯ ಬಿಡರು.

೧೨೮

ಸಾರವಿಲ್ಲದ ವಸ್ತುವಿಗೆ ಆಡಂಬರವೆ ಹೆಚ್ಚು:
ಕಂಚು ಮಾಡುವ ಶಬ್ದವನು ಬಂಗಾರ ಹೊರಡಿಸದು.

೧೨೯

ವಿದ್ವಾಂಸರುಂಟು: ಹಿತ ಕೋರುವವರಲ್ಲ;
ಹಿತ ಕೋರುವವರುಂಟು – ವಿದ್ವಾಂಸರಲ್ಲ;
ಸುಹೃದಯ ವಿದ್ವಾಂಸ ಜಗದಿ ದುರ್ಲಭನು:
ಸಿಗದು ಸಿಹಿಯಾದ, ಹಿತಕರವಾದ ಮದ್ದು.

೧೩೦

ಸ್ವಸ್ಥಾನದಲ್ಲಿರುವ ಮೊಸಳೆ ಆನೆಯನಾದರೂ ಸೆಳೆವುದು;
ತನ್ನ ನೆಲೆಯನು ತೊರೆಯೆ, ಅದನು ನಾಯಾದರೂ ಪರಿಭವಿಪುದು.

೧೩೧

ಕೋಪವೇ ಮಾನವನ ಮೊದಲ ಶತ್ರು;
ದೇಹದೊಳಗಿದ್ದು ದೇಹವನು ಕೆಡಿಸುವುದು:
ಕಟ್ಟಿಗೆಯೊಳಗಡಗಿರುವ ಬೆಂಕಿಯೆಂತಂತು
ಕ್ರೋಧಾಗ್ನಿ ಸುಟ್ಟುಹಾಕುವುದು ದೇಹವನು.

೧೩೨

ಹಾಲು ಕೊಡುವುವು ಧೇನುಗಳು ಹುಲ್ಲು ತಿಂದು;
ಹಾವುಗಳೊ ವಿಷ ನೀಡುವುವು ಹಾಲು ಕುಡಿದು.

೧೩೩

ಎಲ್ಲ ಸಂಪದ, ವಿದ್ಯೆ ಇದ್ದರೂ ಅದು ವ್ಯರ್ಥ, ಪುಣ್ಯವಿರದಿರಲು:
ಕಣ್ಣೆರಡು ಇದ್ದರೂ ಕರಿಯಾಲಿಯಿಲ್ಲದಿರೆ ವ್ಯರ್ಥವೆಂತಂತು.

೧೩೪

ಯಾರ ಮನಗಳು ಪರಸ್ಪರ ಹೊಂದಿಕೊಂಡಿಹವೊ
ಅವರ ಪಾಲಿಗೆ ವಿರಹವೂ ಸಂಗಮ;
ಹೃದಯಗಳು ಹೊಂದಿಕೊಳ್ಳದೆ ಇರುವ ಪಕ್ಷದಲಿ,
ವಿರಹವನ್ನೂ ಮೀರಿಸುವುದು ಮಿಲನ.

೧೩೫

ಕಳೆದುಹೋದ ಋತು ಮರಳಿ ಬರುವುದು,
ಮತ್ತೆ ಉದಯಿಸುವನು ಸವೆದ ಚಂದ್ರಮ;
ಹೋದ ನದಿಯ ಜಲ, ನರರ ಯೌವನ
ಹೋಗಿಬಿಡುವುವು, ಮರಳಿ ಬಾರವು.

೧೩೬

ವಿಷಯಸಕ್ತರು ವನದೊಳಿದ್ದರೂ ದೋಷಗಳು ಸಂಭವಿಸುವುವು;
ಮನೆಯೊಳಿದ್ದರು ಕೂಡ ಪಂಚೇಂದ್ರಿಯದ ಗೆಲುವು ತಪವೆನಿಪುದು:
ಯಾರು ಕುತ್ಸಿತವಲ್ಲದಂಥ ಕೆಲಸಗಳಲ್ಲಿ ತೊಡಗಿರುವರೊ
ಅಂತಹ ವಿರಕ್ತರಿಗೆ ತಮ್ಮ ಮನೆಯೇ ತಪೋವನವಪ್ಪುದು.

೧೩೭

ಒಳಗಿನ ಯಾವುದೊ ಹೇತು ಕೂಡಿಸುವುದು ಪದಾರ್ಥಗಳನು;
ಆಶ್ರಯಿಸಿಕೊಂಡಿರದು ಪ್ರೀತಿ ಹೊರಗಿನುಪಾಧಿಗಳನು:
ಸೂರ್ಯ ಹುಟ್ಟಿದ ಕೂಡಲೇ ಅರಳಿ ನಿಲ್ಲುವುದು ಕಮಲ;
ಚಂದ್ರ ಹುಟ್ಟಿದ ಕೂಡಲೇ ದ್ರವಿಸುವುದು ಚಂದ್ರಕಾಂತ.

೧೩೮

ಧೈರ್ಯವೃತ್ತಿಯ ನರನ ನಿಂದಿಸಿದರೂ ಕೂಡ
ಅವನೆಲ್ಲ ಗುಣಗಳನು ಕೊಲ್ಲುವುದಶಕ್ಯ:
ಖಳನೊಬ್ಬ ಜಿಂಕಿಯನು ತಲೆಕೆಳಕುಗ್ಗೈದರೂ
ಅದರ ಉರಿಯೆಂದಿಗೂ ಕೆಳಗಾಗದು.

೧೩೯

ದಿವ್ಯವಹ ಚೂತರಸವನು ಹೀರಿ ಗರ್ವಿಸವು ಕೋಗಿಲೆಗಳು;
ಕಪ್ಪೆಗಳೊ ಕೆಸರುನೀರನು ಕುಡಿದು ವಟಗುಟ್ಟುತಿಹವು, ನೋಡು.

೧೪೦

ಎಲೆ ಗಿಳಿಯೆ, ಮನಬಂದವೊಲು ತಿರುಗುತಿರುವೆಲ್ಲ ಹಕ್ಕಿಗಳಲಿ
ನಿನಗೆ ಪಂಜರದ ಸೆರೆ: ಇದು ನಿನ್ನ ಇನಿದಾದ ನುಡಿಯ ಫಲವು.

೧೪೧

ಬಾಯಲ್ಲಿ ತುತ್ತು ತುಂಬಿಸಿದಾಗ ಲೋಕದಲಿ ವಶವಾಗರಾರು?–
ಮದ್ದಳೆಯ ಮುಖಕೆ ಬೋನವ ಬಳಿಯೆ ಹೊರಡಿಪುದು ಇಂಪಾದ ದನಿಯ.

೧೪೨

ಸಾಹಿತ್ಯಸಂಗೀತಕಲೆಯಿಲ್ಲದವನು
ಬಾಲ ಕೊಂಬುಗಳಿರದ ಸಾಕ್ಷಾತ್ ಪಶು;
ಹುಲ್ಲು ತಿನ್ನದೆ ಇದ್ದರೂ ಬದುಕಿರುವನು
ಹೇಗೆ? – ಪಶುಗಳ ಪರಮಭಾಗ್ಯವದುವೆ.

೧೪೩

ವಾಸಿಪುವು ಅರಮನೆಯ ಒಳಭಾಗದಲಿ ಬೆಕ್ಕು, ನಾಯಿ;
ಆನೆಯನು ಹೊರಗೆ ಕಟ್ಟಿದ ಮಾತ್ರಕದು ಹಗುರವಹುದೆ?

೧೪೪

ಕಪ್ಪೂರದ ಹುಡಿಯಿಂದ ಪಾತೆಯನು ರಚಿಸಿ
ಕಸ್ತೂರಿಯಿಂದ ದೋಹದವನೆಸಗಿ

ಹೈಮಾಂಬುಪೂರದಿಂದಭಿಷೇಕಿಸಿದರೂ
ಹಳೆಯ ಗುಣವನು ಬಿಡದು ಉಳ್ಳಿಯ ಗಿಡ.

೧೪೫

ಪರದೋಷ ಸಾಸಿವೆಯ ಗಾತ್ರದಷ್ಟಿದ್ದರೂ,
ಕಾಣುವನು ದುಷ್ಟ;
ತನ್ನ ದೋಷವೊ ಬಿಲ್ವಗಾತ್ರದಷ್ಟಿದ್ದರೂ,
ಕಂಡರೂ ಕಾಣ.

೧೪೬

ಧರ್ಮಾರ್ಥಕಾಮಮೋಕ್ಷಗಳಲ್ಲಿ ಒಂದನೂ ಅರಿಯದವನ
ಜನ್ಮ ನಿಷ್ಫಲವಹುದು ಮೇಕೆಗೊರಳಿನಲಿರುವ ಮೊಲೆಗಳಂದ.

೧೪೭

ಇಂದ್ರಿಯಂಗಳ ನಚ್ಚಬಾರದು ತಪಸಿನಲಿ ತೊಡಗಿದ್ದರೂ:
ಮೇನಕೆಯನಪ್ಪಿದನು ವಿಶ್ವಾಮಿತ್ರನೂ ಕಾತರದೊಳು.

೧೪೮

ಮೆಲ್ಲನೆ ನಡೆಯುತ ಸಾವಿರಯೋಜನಗಳನೂ ದಾಟುವುದಿರುವೆ;
ನಡೆಯದೆ ಕುಳಿತರೆ ಗರುಡನಾದರೂ ದಾಟದು ಹೆಜ್ಜೆಯನೊಂದ.

೧೪೯

ಕಾಲ ಪ್ರತಿಕೂಲವಾಗಿರುವನಕ ಹಗೆಯ ಹೊರಬೇಕು ಹೆಗಲಿನಲಿ;
ಸಮಯ ಬಂದಾಗೊಡೆಯಬೇಕು, ಕಲ್ಲೊಳು ಮಡಕೆಯೊಡೆವ ರೀತಿಯಲಿ.

೧೫೦

ಹಸು-ಹಾವುಗಳ ನಡುವೆಯೆಂತಂತು ಉಂಟು ಪಾತ್ರಾಪಾತ್ರ ಭೇದ:
ಹುಲ್ಲಿನಿಂದುತ್ಪತ್ತಿಯಾಗುವುದು ಹಾಲು, ಆ ಹಾಲಿನಿಂದ ವಿಷ.

೧೫೧

ನಿರುಪದ್ರವಿಯಹ ಯಾವ ಮಹಾತ್ಮನಿಗೂ ಸಲ್ಲದು ಪೂಜೆ:
ನಾಗನನರ್ಚಿಸುವರು ಜನ; ಗರುಡ ಗಜಾದಿಯನರ್ಚಿಸರು.

 

೧೫೨

ಗುಣಗಳಂತರ ತಜ್ಞನಿಗೆ ಮಾತ್ರ ತಿಳಿಯುವುದು, ಬೇರೆ ಜನಕಲ್ಲ:
ಜಾಜಿ-ಮಲ್ಲಿಗೆಗಳ ಸುಗಂಧವನು ಮೂಗು ತಿಳಿಯುವುದು, ಕಣ್ಣಲ್ಲ.

೧೫೩

ಸಹಜಸುಂದರವಾದ ವಸ್ತು ಸಂಸ್ಕಾರವನು ಆಸೆಪಡದು:
ಮುತ್ತು ರತ್ನವ ಸಾಣೆಕಲ್ಲಿನಿಂದುಜ್ಜುವುದು ವ್ಯರ್ಥವಹುದು.

೧೫೪

ದುಷ್ಟನನು ಜಯಿಸುವುದು ಯುಕ್ತಿಯಲಿ, ಕಲಹದಿಂದಲ್ಲ:
ಹೆಮ್ಮರವ ಕೆಡಹುವುದು ಸುತ್ತಮುತ್ತಲ ನೆಲವ ಸವೆಸಿ.

೧೫೫

ಯಾವುದು ಶಕ್ಯವೊ, ಅದು ಶಕ್ಯ,
ಯಾವುದಶಕ್ಯವೊ ಅದಶಕ್ಯ:
ಬಂಡಿ ನಡೆಯದು ಜಲದಲ್ಲಿ,
ಹಡಗು ನಡೆಯದು ನೆಲದಲ್ಲಿ.

೧೫೬

ಪ್ರಾಣಿಗಳ ಆಕಾರ ಕಾರಣವಾಗದಹ ದೌರ್ಜನ್ಯಕೆ:
ಕ್ಷೀರಸಾಗರಜನ್ಯ ವಿಷ ಪ್ರಾಣಾಪಹಾರಕವಾದುದು

೧೫೭

ಶುಭವೊ ಅಶುಭವೊ ಕರ್ಮಫಲ ಕಾಲವನು ಹಾರುವುದು:
ಶರದದೊಳೆ ಫಲಿಸುವುದು ಬತ್ತ, ಚೈತ್ರದಲ್ಲಲ್ಲ

೧೫೮

ಸತ್ಪುರುಷರನು ದೂಷಿಸುವ ವ್ಯಕ್ತಿ ತನ್ನನೇ ದೂಷಿಸುವನು:
ಗಗನಕ್ಕೆ ಬೂದಿಯೆಸೆವವನ ತಲೆ ಮೇಲೆಯೇ ಬೀಳುವುದದು.

೧೫೯

ತನ್ನವರ ಹಾಳುಮಾಡುವುದರೊಳೆ ದೊಡ್ಡತನ ಕಾಣುವುದು ಜನಕೆ:
ಗಿಡುಗ ಹಕ್ಕಿಗಳನ್ನೆ ಕೊಲ್ಲುವುದು, ಹಾವುಗಳನಲ್ಲ.

೧೬೦

ಹತ್ತಿರಿದ್ದರೂ ದೊಡ್ಡವರನು ಗೌರವಿಸದು ಈ ಲೋಕ:
ಸನಿಹದಿ ಹರಿಯುವ ಪವಿತ್ರ ಗಂಗೆಯನಾರೂ ವಂದಿಸರು.

೧೬೧

ವಯಸು ಹೆಚ್ಚಿದಂತೆ ನರನ ಬುದ್ಧಿ ಪಾಕಗೊಳುವುದು:
ಮುದಿಯಾಗಿಹ ಗಂಧದ ಮರದೊಳು ಪರಿಮಳವೊಗೆವುದು.

೧೬೨

ಜನರಿಗೆ ಚಿತ್ತದಿ ಪರಾಶಯ ತಮ್ಮಾಶಯದಂತೆಯೆ ತೋರುವುದು:
ಮುಖಚಂದ್ರನ ಪ್ರತಿಬಿಂಬವು ಖಡ್ಗದಿ ಅತಿದೀರ್ಘತೆಯನು ತಳೆಯುವುದು.

೧೬೩

ಉತ್ತಮರನಲ್ಲ, ಅಧಮರನು ದುಃಖಾವೇಗ ಬಾಧಿಸುವುದು:
ಕಣ್ಣುಗಳಿಗಲ್ಲ, ಪಾದದ್ವಯಕೆ ಶೀತ ರೋಗವ ತರುವುದು.

೧೬೪

ಸ್ವಸ್ಥಪ್ರಕೃತಿಗೆ ದೋಷಲೇಶವು ಕೂಡ ತರುವುದು ವ್ಯಥೆಯನು:
ಕಣ್ಣು ದೂಳಿನ ಕಣವನೂ ಸೈರಿಸದೆ ಸಂತಾಪಿಸುವುದು.

೧೬೫

ಐದು ವರ್ಷ ಮುದ್ದಿಸುವುದು; ಹತ್ತು ವರ್ಷ ಹೊಡೆವುದು:
ತುಂಬಲು ಹದಿನಾರು, ಮಿತ್ರನೊಲು ಮಗನನು ಗಣಿವುದು.

೧೬೬

ಶಕ್ತನಾದರು ಕೂಡ ಶಕ್ತಿಯನು ಪ್ರಕಟಿಸದ
ಮನುಜನು ತಿರಸ್ಕಾರವನು ಪಡೆವನು:

ಮರದೊಳಡಗಿದ ಬೆಂಕಿಯನು ದಾಟುವುದು ಸುಲಭ;
ಉರಿವ ಬೆಂಕಿಯನೆಂತು ದಾಟಬಹುದು?

೧೬೭

ಅಲ್ಪತೆಯ ಪಡೆವರು ಮಹಾಪುರುಷರೂ ಕೂಡ,
ನಿರ್ಗುಣರೊಳೂ ಗುಣವು ವಿಸ್ತರಿಪುದು –
ಆಧಾರ-ಆಧೇಯ ಭಾವದಿಂದಪ್ಪುದಿದು,
ಮುಕುರದೊಳು ಗಜರಾಜನೆಂತೊ ಅಂತು.

೧೬೮

ಹೂವುಗಳ ನಡುವೆಯಿಹ ದುಂಬಿ ಸಾರವನೆಂತು ಸಂಗ್ರಹಿಪುದೊ,
ಅಂತು ಪಂಡಿತರೆಲ್ಲ ಶಾಸ್ತ್ರಗಳ ಸಾರವನು ಸಂಗ್ರಹಿಪರು.

೧೬೯

ಶೂನ್ಯಾತ್ಮರೂ ಮುಖ್ಯನನು ಪುರಸ್ಕರಿಸಿ ಸಾಧಕರಪ್ಪರು;
ಅವನಿರದೆ ಏನನೂ ಸಾಧಿಸರು– ಸಂಖ್ಯಾಂಕ ಬಿಂದುಗಳೊಲು.

೧೭೦

ನೆಲವ ತೋಡುತ್ತ ತೋಡುತ್ತ ನರನೆಂತು ನೀರನು ಪಡೆವನೊ,
ಅಂತು ಗುರುವಿನೊಳಿರುವ ವಿದ್ಯೆಯನು ಶುಶ್ರೂಷೆಯಿಂ ಗಳಿಪನು.

೧೭೧

ಸತಿಯಳಿದು ದುಃಖಿಯಾದಾಗಲೂ ಧೈರ್ಯವನು ಬಿಡಬಾರದು;
ಧೈರ್ಯದಿಂದಲೆ ಎಂದಿಗಾದರೂ ಸದ್ಗತಿಯ ಪಡೆವನವನು:
ಸಾಗರದ ನಡುವೆ ಹಡಗೊಡೆದುಹೋದಾಗಲೂ ಕರ್ಣಧಾರ
ಕಡಲನುತ್ತರಿಸಿ ದಡವನು ಕಾಂಬ ಬಗೆಯನೇ ಚಿಂತಿಸುವನು.

೧೭೨

ಹಕ್ಕಿಗಳು ವೃಕ್ಷವನು ನದಿಗಳು ಸಮುದ್ರವನು,
ತರುಣಿಯರು ಪತಿಯನಾಶ್ರಯಿಸುವಂತೆ
ಸರ್ವಗುಣಗಳು ಧನವನಾಶ್ರಯಿಸಿವೆ.

೧೭೩

ಗುಣವನರಿಯದ ನರರು ಗುಣಿಗಳ ಗುಣೋತ್ಕರ್ಷ-
ವನು ನಿಂದಿಸುವರಿದರೊಳೇನಚ್ಚರಿ?-
ಕರಿಕುಂಭಜಾತವಹ ಮುತ್ತುಗಳನು ಕಿರಾತಿ
ಬಿಟ್ಟು, ಗುಲಗಂಜಿಗಳನೇ ತೊಡುವಳು.

೧೭೪

ತಪವ ಕೈಗೊಳಬೇಕು ಒಬ್ಬಂಟಿಯಾಗಿ;
ಅಧ್ಯಯನ ಮಾಡುವೊಡೆ ಇಬ್ಬರಿರಬೇಕು;
ಸಂಗೀತವಾಗುವೆಡೆ ಮೂವರಿರಬೇಕು;
ದಾರಿಸಂಚಾರಕ್ಕೆ ನಾಲ್ವರಿರಬೇಕು;
ವ್ಯವಸಾಯ ಗೈಯುವೊಡೆ ಐವರಿರಬೇಕು;
ಸಂಗ್ರಾಮಕಾದರೋ ಬಹಳ ಜನ ಬೇಕು.

೧೭೫

ದೂರದಲ್ಲಿಹ ಬೆಟ್ಟ, ಮುಖಮುಂಡನದ ಸೂಳೆ,
ರಣವಾರ್ತೆ- ದೂರಕಿವು ಮೂರು ರಮ್ಯ.

೧೭೬

ಮಾಣಿಕ ಅನರ್ಘ್ಯವಾಗಿದ್ದರೂ ಬಯಸುವುದು ಚಿನ್ನದಾಶ್ರಯವ.
ಆಶ್ರಯವಿರದೆ ಶೋಭಿಸುವುದಿಲ್ಲ ಪಂಡಿತರು, ವನಿತೆಯರು ಮತ್ತು
ಬಳ್ಳಿಗಳು.

೧೭೭

ಪ್ರಮದೆ, ಮದಿರೆ, ಲಕ್ಷ್ಮಿಯೆಂದು ಕಳ್ಳು ಮೂರು ಬಗೆಯದು:
ನೋಟ, ಪಾನ, ಗಳಿಕೆಯಿಂದ ಇವು ಹುಚ್ಚನು ತರುವುವು.

೧೭೮

ಪತ್ನಿ, ಭೋಜನ, ಧನಗಳಲಿ ತೃಪ್ತಿ ಇರಬೇಕು;
ಇರಬಾರದದು ದಾನ, ತಪ, ಓದುಗಳಲಿ.

೧೭೯

ಬದುಕಿದ್ದರೂ ಐದು ಜನ ಸತ್ತಹಾಗೆಂದು ವ್ಯಾಸರೊರೆದಿಹರು:
ನಿತ್ಯರೋಗಿ, ದರಿದ್ರ, ದಡ್ಡ, ಸೇವಕ, ಪ್ರವಾಸಿಗಳು.

೧೮೦

ದಾರಿಯನು ಕನ್ನೆಯನು ಬೆಟ್ಟದುದಿಯನು ವಿದ್ಯೆಯನು ಸಂಪದವನು–
ಈ ಐದನೂ ಮನುಜ ದುಡುಕದೆಯೆ ಮೆಲ್ಲಮೆಲ್ಲನೆ ಸಾಧಿಸುವುದು.

೧೮೧

ಲೋಭ ಪಾಪಕೆ ಹೇತು, ರುಚಿ ರುಜೆಗಳಿಗೆ ಹೇತು,
ದುಃಖಹೇತುಗಳು ಇಷ್ಟಗಳು –
ಸುಖಿಯಪ್ಪುದಿವು ಮೂರ ಬಿಟ್ಟು.

೧೮೨

ಭಾರ್ಯೆಯಗಲಿಕೆ, ಸ್ವಜನರಪವಾದ, ಋಣಶೇಷ,
ಕೃಪಣನನು ಸೇವಿಪುದು, ದಾರಿದ್ರ್ಯದ
ಕಾಲದಲಿ ಪ್ರಿಯರ ದರ್ಶನ–ಐದು ಮಾನವನ
ದೇಹವನು ಬೆಂಕಿಯಿಲ್ಲದೆ ಸುಡುವುವು.

೧೮೩

ನಕ್ಷತ್ರಗಳಿಗೆ ಭೂಷಣ ಚಂದ್ರ, ಸತಿಯರಿಗೆ ಪತಿ ಭೂಷಣ,
ಧರೆಗೆ ಭೂಷಣ ರಾಜ, ವಿದ್ಯೆಯಾದರೊ ಎಲ್ಲಕೂ ಭೂಷಣ.

೧೮೪

ದೇಹಪೋಷಣದಲ್ಲಿ ತಾಯಿಗೆಣೆಯಿಲ್ಲ;
ದೇಹಶೋಷಣದಲ್ಲಿ ಚಿಂತೆಗೆಣೆಯಿಲ್ಲ;
ದೇಹತೋಷಣದಲ್ಲಿ ಪತ್ನಿಗೆಣೆಯಿಲ್ಲ;
ದೇಹಭೂಷಣದಲ್ಲಿ ವಿದ್ಯೆಗೆಣೆಯಿಲ್ಲ

೧೮೫

ಬಯಕೆಗಳೆಲ್ಲವ ಸಲಿಸುವ ಸಂಪದ ದೊರೆಯಿತು–ಆಮೇಲೆ?
ವೈರಿಯ ತಲೆಮೇಲಿಟ್ಟಾಯಿತು ಪಾದಗಳನು– ಆಮೇಲೆ?
ಬಂಧುಗಳನು ವಿಭವಗಳಿಂ ತಣಿಸಿದ್ದಾಯಿತು– ಆಮೇಲೆ?
ಕಲ್ಪಾಂತದವರೆಗೂ ತಾ ಬದುಕಿದ್ದಾಯಿತು– ಆಮೇಲೆ?

೧೮೬

ಕಳೆಯಲು ವಸಂತ, ಕೋಗಿಲೆಯ ರವದಿಂದೇನು?
ಭೀರು ಬಹುಶಸ್ತ್ರಗಳ ಧರಿಸಿದುದರಿಂದೇನು?
ವ್ಯಸನಕಾಲದಿ ವಿಮುಖನಹ ಮಿತ್ರನಿಂದೇನು?
ವಿದ್ಯಾವಿಹೀನ ಪುರುಷನ ಬಾಳ್ಕೆಯಿಂದೇನು?

೧೮೭

ಸತ್ಪುರುಷರಿದ್ದಲ್ಲಿ ಅಮೃತವಿನ್ನೇಕೆ?
ಖಳರಿದ್ದ ಕಡೆ ಕಾಳಕೂಟವಿನ್ನೇಕೆ?
ದಾತಾರನಿದ್ದಲ್ಲಿ ಕಲ್ಪಕುಜವೇಕೆ?
ಬೇಡುವವರಿದ್ದ ಕಡೆ ತೃಣಗಳಿನ್ನೇಕೆ?
ಪ್ರಿಯೆ ಕಣ್ಗೆ ಬರೆ ಕಪ್ಪುರದ ಕಡ್ಡಿಯೇಕೆ?
ಸಂಸಾರವಿರೆ ಇಂದ್ರಜಾಲ ಬೇರೇಕೆ?

೧೮೮

ಅಗ್ನಿ ಕಾಡನು ಸುಡುವ ಸಮಯದಿ ಮಿತ್ರನಪ್ಪನು ಮಾರುತ,
ದೀಪವನು ನಂದಿಸುವವನವನೇ: ಯಾರು ಗೆಳೆಯರು ಬಡವಗೆ?

೧೮೯

ಪರನಾದರೂ ಹಿತವ ಗೈವವನು ಬಂಧು;
ಬಂಧುವಾದರು ಅಹಿತ ಗೈವವನು ಪರನು:
ದೇಹದಲಿ ಹುಟ್ಟಿಯೂ ರುಜೆ ಅಹಿತವಹುದು:
ಕಾಡಿನಲಿ ಹುಟ್ಟಿದೌಷಧವು ಹಿತವಹುದು.

೧೯೦

ನಂಬಬಾರದು ಶತ್ರುಜನಗಳನು; ಮಿತ್ರರನು
   ಅಂತೆಯೇ ನಂಬುವುದು ತಪ್ಪು:
ಮಿತ್ರನೇನಾದರೂ ಕುಪಿತನಾದರೆ ಬಯಲು-
   ಮಾಡುವನು ಒಳಗುಟ್ಟುಗಳನು.

೧೯೧

ಯಾರು ಪ್ರತ್ಯಕ್ಷದಲಿ ಪ್ರಿಯವಾದಿಯಾಗಿಹನೊ,
   ಹಿಂದುಗಡೆ ಕಾರ್ಯಗಳ ಹಾಳುಮಾಡುವನೊ-
ಕ್ಷೀರಮುಖವಹ ವಿಷದ ಕುಂಭದಂತಿರುವ ಆ
   ಗೂಢಶತ್ರುವನು ಪರಿಹರಿಸಬೇಕು.

೧೯೨

ಬಹಳ ಕಳವಳ ಬೇಡ ಜೀವಿತಕ್ಕಾಗಿ; ವಿಧಿ ನಿರ್ಮಿಸಿಹುದದನು:
ಜೀವಿ ಬಸಿರಿಂದಿಳಿದೊಡನೆ ತಾಯ ಮೊಲೆಯಿಂದ ಹಾಲುಕ್ಕಿಬಹುದು.

೧೯೩

ಸತ್ಪುರುಷರಾದವರು ದೂರದಲ್ಲಿದ್ದರೂ
   ದೂತತ್ವವೆಸಗುವುವು ಸದ್ಗುಣಗಳು:
ಕೇದಗೆಯ ಹೂವುಗಳು ಹೊಮ್ಮಿಸುವ ಪರಿಮಳವ
   ಮೂಸಿ ತಾವೇ ಹೋಗುವುವು ಅಳಿಗಳು.

೧೯೪

ಬುದ್ಧಿ, ಉದ್ಯಮ, ಶಕ್ತಿ, ಸಾಹಸ, ಧೈರ್ಯ ಮತ್ತು ಪರಾಕ್ರಮ-
ಎಲ್ಲಿ ಈ ಆರುಂಟೊ ಅಲ್ಲಿ ಸಹಾಯಗೈವನು ದೇವರು.

೧೯೫

ದೈವೇಚ್ಛೆಯಂತಾಗಲೆಂದು ಉದ್ಯೋಗವನು ಬಿಡಬಾರದು:
ಯತ್ನ ಮಾಡದೆ ಯಾರು ಎಳ್ಳಿನಿಂದೆಣ್ಣೆಯನು ಪಡೆಯಬಹುದು?

೧೯೬

ಉದ್ಯೋಗನೆಸಗದೆಯೆ ಸಂಪತ್ತನಾರ್ಜಿಸುವುದರಿಂದು ಜೀವಿಗಳು:
ಹಾಲ್ಗಡಲ ವಿಷದ ಕ್ಲೇಶವನು ಸುರರನುಭವಿಸಿ ಅಮೃತವೀಂಟಿದರು.

೧೯೭

ಜಡ ಕೂಡ ಜಾಣನಾಗುವನು ಬಲ್ಲವರ ಸಂಸರ್ಗದಿಂದ:
ಕೆಸರು ನೀರೂ ಕೂಡ ತಿಳಿಯಾಗುವುದು ಕತಕಬೀಜದಿಂದ.

೧೯೮

ಗುಣವಂತನಾದರೂ ಕುಸ್ಥಾನವನು ಹೊಗಲು ಬಾಧೆಗೊಳ್ಳುವನು:
ಲೋಹಸ್ಥವಾದಾಗ ಅಗ್ನಿಯೂ ಕಮ್ಮಾರರ ಪೆಟ್ಟ ತಿನ್ನುವುದು.

೧೯೯

ನೆಲೆಗೊಂಡಿರುವುದು ಶಿಲ್ಪಿಯ ಕೌಶಲ ಪಾತ್ರವಿಶೇಷದಲಿ:
ಮೋಡದ ಜಲ ಮುಕ್ತಾಫಲವಪ್ಪುದು ಕಡಲಿನ ಚಿಪ್ಪಿನಲಿ.

೨೦೦

ನಿನ್ನ ಪ್ರಭಾವವನು, ನಾಗೇಂದ್ರ, ಬಲ್ಲೆ:
ಹರನ ಕೊರಳಿನೊಳಿದ್ದು ಗರ್ಜಿಸುತ್ತಿರುವೆ.
ಸ್ಥಾನ ಪ್ರಧಾನವಪ್ಪುದು, ಶಕ್ತಿಯಲ್ಲ:
ಸ್ಥಾನದಲ್ಲಿರುವ ಕಾಪುರುಷನೂ ಶೂರ.

೨೦೧

ಓದುತಿಹ ಮಾನವನಿಗಿಲ್ಲ ಮೂರ್ಖತ್ವ;
ಪಾಪ ಹೊದ್ದದು ಜಪಿಸುತಿರುವ ಮನುಜನನು;
ಮೌನದಿಂದಿರುವ ವ್ಯಕ್ತಿಗೆ ಕಲಹವಿಲ್ಲ;
ಭಯವಿಲ್ಲ ಜಾಗರೂಕತೆಯುಳ್ಳವನಿಗೆ.

೨೦೨

ಬಲಿಗೆ ಬಂಧನವಾದುದತಿ ದಾನದಿಂದ;
ದುರ್ಯೋಧನನು ಕೆಟ್ಟನತಿ ಮಾನದಿಂದ:

ನಾಶಗೊಂಡನು ರಾವಣನು ಲೌಲ್ಯದಿಂದ-
'ಅತಿ' ವರ್ಜನೀಯವಾಗಿಹುದು ಸರ್ವತ್ರ.

೨೦೩

ಯಾರ ಧರ್ಮದಿ ಪುತ್ರ ಮಿತ್ರ ಬಾಂಧವರು ಬದುಕುವರೊ
ಅವನ ಜೀವಿತ ಸಫಲ; ತನಗಾಗಿ ಬದುಕದನರಾರು?

೨೦೪

ಯಾರ ಜನನದಿ ವಂಶ ಉನ್ನತಿಯ ಪಡೆಯುವುದೊ,
ಆತನೇ ದಿಟವಾಗಿ ಜನಿಸಿದನನು;
ಪರಿವರ್ತಿಸುತ್ತಿರುವ ಸಂಸಾರದೊಳು ಯಾರು
ಮೃತರಾದನರು ಮತ್ತೆ ಹುಟ್ಟದಿಹರು?

೨೦೫

ವಿದ್ಯೆ, ಕುಲ, ಯೋಗ್ಯತೆಗಳಿಲ್ಲದನನಾದರೂ
ಹತ್ತಿರದ ನರನನಾಶ್ರಯಿಪನು ದೊರೆ;
ಪ್ರಾಯೇಣ ಭೂಮಿಪರು, ಪ್ರಮದೆಯರು, ಬಳ್ಳಿಗಳು
ಸುತ್ತಿಕೊಳುವರು ಬಳಿಯೊಳಿರುವವನನೆ.

೨೦೬

ವಿಷದೊಳಿದ್ದರೆ ಅಮೃತ ಅದನು ಗ್ರಹಿಸುವುದು,
ಬಾಲನೊಳು ಸೂಕ್ತಿಯಿರಲದನು ಗ್ರಹಿಸುವುದು,
ವೈರಿಯೊಳು ಸದ್ವೃತ್ತವಿರಲು ಗ್ರಹಿಸುವುದು,
ಮಲದಿಂದಲೂ ಕೂಡ ಹೊನ್ನ ಗ್ರಹಿಸುವುದು.

೨೦೭

ದೊಡ್ಡ ಕುಲದೊಳು ಹುಟ್ಟಿ ರೂಪ ಯೌವನಗಳನು ಪಡೆದು, ವಿದ್ಯೆಯನು
ಪಡೆಯದಿಹ ಜನ ಗಂಧಹೀನ ಮುತ್ತುಗದ ಹೂಗಳೊಲು ಶೋಭಿಸರು.

೨೦೮

ಸುಳ್ಳಾಡುವುದಕಿಂತ ಮೌನವೇ ಲೇಸು;
ಪರದಾರ ಗಮನಕಿಂತಲು ಕ್ಲೈಬ್ಯ ಲೇಸು;
ಚಾಡಿನುಡಿ ಕೇಳುವುದಕಿಂತ ಮೃತಿ ಲೇಸು;
ಪರಧನಾಸ್ವಾದಕಿಂತಲು ತಿರುಪೆ ಲೇಸು.

೨೦೯

ಮನವನಾಹ್ಲಾದಗೊಳಿಸುತ ಮೆಲ್ಲಮೆಲ್ಲನೈದುವ ಸ್ತ್ರೀಯರಿಂದ
ಭೇದಗೊಳುವರು ದೊಡ್ಡವರು ಕೂಡ–ನೀರಿನಿಂ ಬೆಟ್ಟವೆಂತಂತೆ.

೨೧೦

ಎಲೆ ಎಲೆ ಕೋಗಿಲೆ, ಬಿಡು ಮೌನವನು;
ಹೊರಡಿಸು ತುಸು ಪಂಚಮರಾಗವನು:
ಇಲ್ಲವೊ, ಕಾಗೆಯ ಕುಲ ಕಿಕ್ಕಿರಿದ
ಚೂತದಿ ನಿನ್ನನು ಅರಿವವರಾರು?

೨೧೧

ವಿದ್ಯೆಯಿಲ್ಲದ ಜೀವಿತವು ವ್ಯರ್ಥ, ನಾಯ ಬಾಲದೊಲು:
ಮುಚ್ಚದದು ಗುಹ್ಯವನು, ಓಡಿಸದು ಕಾಡುನೊಣಗಳನು.

೨೧೨

ದುಷ್ಟೆಯಹ ಪತ್ನಿ, ಶಠನಹ ಮಿತ್ರ, ಮಾರುತ್ತರವ ಕೊಡುವ ಆಳು,
ಹಾವಿರುವ ಮನೆಯಲ್ಲಿ ವಾಸ– ಇವು ಸಾವೆ ಸರಿ, ಸಂದೇಹವಿಲ್ಲ.

೨೧೩

ಸಾವು ನಗುವುದು ದೇಹರಕ್ಷಕನ ಕಂಡು:
ಧನರಕ್ಷಕನ ಕಂಡು ನಗೆ ವಸುಂಧರೆಗೆ;
ಮಕ್ಕಳಲಿ ವಾತ್ಸಲ್ಯದಳಿದ ಗಂಡನನು
ಕಂಡು ನಗುವಳು ದುಶ್ಚರಿತೆಯಾದ ಹೆಣ್ಣು.

೨೧೪

ಯಮರಾಜ ಸೋದರನೆ, ಓ ವೈದ್ಯರಾಜನೇ, ನಿನಗೆ ನಮನ;
ಒಯ್ಯುವನು ಯಮ ಪ್ರಾಣವನು, ನೀನೊ ಪ್ರಾಣ ಧನಗಳ-
ನೊಯ್ಯುವೆ.

೨೧೫

ಐಶ್ವರ್ಯದೊಡನೆ ಸಂಬಂಧ ಬೆಳೆಸುವುದು ಎಂದೆಂದಿಗೂ ಹೊಲ್ಲ:
ಹೋದರದು ನಮಗೆ ಗೌರವವಿಲ್ಲ, ಬಂದರೋ ಕ್ಷಯವಹುದು ಅರ್ಥ.

೨೧೬

ಸಾಗರದಿ ಮಳೆಗರೆಯುವುದು ವ್ಯರ್ಥವಹುದು;
ತೃಪ್ತನಿಗೆ ಉಣಬಡಿಸುವುದು ವ್ಯರ್ಥವಹುದು;
ಸಮೃದ್ಧನಿಗೆ ದಾನ ಕೊಡೆ ವ್ಯರ್ಥವಹುದು –
ಇವು ನೀಚನಿಗೆ ಒಳಿತನೆಸಗಿದಂತಹವು.

೨೧೭

ನಾನೆ ದೋಷಗಳಿಂದ ಕೆಟ್ಟುಹೋದವನು;
ಭಗವಂತ, ಬರಿದೆ ನಿನ್ನನು ದೂರುತಿರುವೆ:
ಕಾಂತಾವಿರಹಜ್ವರದಿ ಸಂತಪ್ತನಾದ
ದುರ್ಮತಿಯು ದೂರುವನು ಅಮೃತಕಿರಣನನು.

೨೧೮

ಕಳೆದು ಹೋಗುವುದಿರುಳು, ಬೆಳಗು ತಾನಹುದು,
ಸೂರ್ಯ ಮೂಡುವನು, ನೀರೇಜ ನಕ್ಕಪುದು –
ಕೋಶಗತವಹ ದುಂಬಿ ಚಿಂತಿಸಿರಲಿಂತು,
ಅಯ್ಯಯ್ಯೊ! ಜೇರೆತ್ತಿ ತಾನೆ ತಾವರೆಯು.

೨೧೯

ಉಪ್ಪು ನೀರನು ಕುಡಿದು ಮೋಡಗಳು ತಾವದನೆ
ಸವಿಗೊಳಿಸಿ ಮತ್ತೆ ಕಾರುವುವು;
ಅಂತೆ ಸಂತರು ದುರ್ಜನರ ಹೊಲ್ಲನುಡಿಗಳನು
ನುಂಗಿ ಒಳ್ನುಡಿಯನಾಡುವರು.

೨೨೦

ಆನೆ ಕುದುರೆಯನಲ್ಲ, ಹುಲಿಯನಲ್ಲವೆ ಅಲ್ಲ,
ಆಡುಮರಿಯನು ಮಾತ್ರ ಬಲಿಗೊಡುವರು:
ಹೊಡೆಯುವನು ಬಲಹೀನರನು ದೇವರು.

೨೨೧

ಜ್ಯೋತಿಷಿ ಗುಣಿಪನು ಚಂದ್ರ-ವಿಶಾಖೆಗೆ
ಗಗನದೊಳಪ್ಪ ಸಮಾಗಮನ;
ಮನೆಯಲಿ ಹೆಂಡತಿ ವಿವಿಧ ವಿಟರೊಡನೆ
ಆಟವಾಡುವುದನವನರಿಯ.

೨೨೨

ದೊಡ್ಡವರ ಸಹಿಸಿಕೊಳಬಹುದು, ಅದು ಸುಲಭ;
ಅವರಿಂದ ಶಕ್ತಿ ಪಡೆದವರು ದುಸ್ಸಹರು:
ಸೂರ್ಯತಾಪವನೆಂತೊ ತಾಳಿಕೊಳಬಹುದು;
ಕಾದ ಮರಳಿನ ಮೇಲೆ ಚಣ ನಿಲ್ಲಲಾಗದು.

೨೨೩

ಮತ್ಸರಗ್ರಸ್ತರಾಗಿಹರು ತಿಳಿದವರು
ಪ್ರಭುಗಳಾದವರೆಲ್ಲ ಗರ್ವದೂಷಿತರು
ಅಜ್ಞಾನಹತರಾಗಿರುವರು ಉಳಿದವರು–
ಅಂಗದೊಳೆ ಜೀರ್ಣವಾದುದು ಸುಭಾಷಿತವು!

೨೨೪

ಬಿದ್ದರೂ ಮೇಲೇಳುವನು ಆರ್ಯನಾದವನು ಚೆಂಡಿನಂತೆ;
ಆದರೆ ಅನಾರ್ಯನೋ ಬಿದ್ದೆ ಬೀಳುವನು ಮಣ್ಣುಂಡೆಯಂತೆ.

೨೨೫

ಕೆಟ್ಟವನು ಬಲಹೀನನಾದರು ದ್ರೋಹವನು ಚೋದಿಸುವನು:
ಕಲ್ಲು ತಾನೇ ಕಡಿಯದಾದರು ಹರಿತಗೊಳಿಸುವುದಲಗನು.

೨೨೬

ವ್ಯಸನ ಉತ್ಸವಗಳಲಿ ಕ್ಷಾಮ ಸಮರಗಳಲ್ಲಿ
ನ್ಯಾಯಾಲಯದಲಿ ಸುಡುಗಾಡಿನಲ್ಲಿ
ಯಾರು ಜೆನ್ನೊಳು ನಿಲುವನವನೆ ಬಂಧು.

೨೨೭

ಸುಂದರಿಯ ಲಾವಣ್ಯ ಅಂಧಪತಿಗೆಂತಂತೆ
ಮೂರ್ಖಜನಕೊರೆವ ಮಾತೆಲ್ಲ ವ್ಯರ್ಥ.

೨೨೮

ಕಡಲಲಿ ತೇಲುವ ಕಟ್ಟಿಗೆಯೆರಡು
ಚಣ ಸಂಧಿಸಿ ಮತ್ತಗಲುವುವು-
ಆ ತೆರದಲಿ ನಮ್ಮಾಲೋಕದೊಳು
ಜನರ ಸಮಾಗಮವಾಗುವುದು.

೨೨೯

ವಿದ್ವಾಂಸರಿಲ್ಲದೆಡೆ ಅಲ್ಪಮತಿಗಳು ಕೂಡ ಪಡೆಯುವರು ನುತಿಯ:
ಪಾದಪಗಳಿಲ್ಲದಿಹ ದೇಶದಲಿ ಮರವಹುದು ಹರಳುಗಿಡ ಕೂಡ.

೨೩೦

ಪ್ರೀತಿ ಸಖ್ಯವ ಮಾಡಲಾಗದು ದುಷ್ಟಜನಗಳ ಸಂಗಡ:
ಕೆಂಡ ಬಿಸಿಯಾಗಿರಲು ಸುಡುವುದು, ಆರಿದರೆ ಮಸಿ ಬಳಿವುದು.

೨೩೧

ಪುರುಷನಲಿ ಗುಣವಿದ್ದರದು ಹೊರಸೂಸುವುದು ತಾನಾಗಿಯೆ:
ಕಸ್ತೂರಿಯ ಪರಿಮಳವ ಶಪಥದೊಳಿತ್ತು ತೋರಿಸಬರುವುದೆ?

೨೩೨

ಅನ್ಯಮುಖದಲಿ ಬರುವ ಬಯ್ಗುಳ ಪ್ರಿಯನ ಮುಖದಲಿ ಹಾಸ್ಯವು:
ಬೇರೆ ಇಂಧನವೆಬ್ಬಿಸುವ ಹೊಗೆ ಧೂಪವೆನಿಸುವುದಗುರೊಳು!

೨೩೩

ಕ್ಷಮೆಯ ಶಸ್ತ್ರವ ಹಿಡಿದ ಮನುಜನಿಗೇನ ಗೈವನು ದುರ್ಜನ?-
ಹುಲ್ಲಿರದ ಕಡೆ ಬಿದ್ದ ಬೆಂಕಿಯು ತಾನೆ ಪಡೆವುದು ಪ್ರಶಮನ.

೨೩೪

ಬೇರೆ ಬೇರೆ ಶ್ರುತಿಗಳುಂಟು, ಬೇರೆ ಬೇರೆ ಸ್ಮೃತಿಗಳು;
ಯಾವ ಮುನಿಯ ವಚನವೂ ಪ್ರಮಾಣವೆನಿಸಿಕೊಳ್ಳದು:
ಧರ್ಮದೊಂದು ತತ್ವ ಗುಹೆಗಳಲ್ಲಿ ಅಡಗಿಕೊಂಡಿದೆ:
ಬಹು ಜನಗಳು ಹೋದ ದಾರಿ ನಮಗೆ ದಾರಿಯೆನಿಸಿದೆ.

೨೩೫

ತಾಯಂದಿರೆಂಬಂತೆ ಪರರ ಹೆಂಡಿರನು
ಮಣ್ಣು ಹೆಂಟೆಯ ತೆರದಿ ಪರರ ದ್ರವ್ಯವನು
ತನ್ನಂತೆ ಜಗದ ಜೀವಿಗಳೆಲ್ಲವನ್ನು
ಕಾಣುವವನಾವಾತನವನೆ ಪಂಡಿತನು.

೨೩೬

ತಾಯಿ ಬಾಲ್ಯದಿ ಮೃತಿಯನೈದಲು
ಸುತರು ಮುಪ್ಪಿನೊಳೈದಲು
ಜವ್ವನದಿ ಸತಿ ಸಾವನಪ್ಪಲು
ಬೇರೆ ಆಪತ್ತೇನಿದೆ?

೨೩೭

ಸರ್ವಜಂತುಗಳು ತುಷ್ಟಿಗೊಳ್ಳುವುವು ಪ್ರಿಯವಾಕ್ಯವನಾಡಿದರೆ;
ಆದರಿಂ ಪ್ರಿಯವನೆ ನುಡಿಯುವುದೆಲ್ಲರು–ಬಡತನ ಮಾತಿನೊಳೇಕೆ?

೨೩೮

ನದಿಗಳು ತಾವೇ ಕುಡಿಯವು ನೀರನು,
ಮರಗಳು ತಿನ್ನವು ಹಣ್ಣುಗಳ;
ತಿನ್ನವು ಮೋಡಗಳೇ ಸಸ್ಯವನು—
ಸತ್ಪುರುಷರ ಸಿರಿ ಪರಹಿತಕೆ.

೨೩೯

ಕೌತುಕಕರೀ ವಾರ್ತೆ, ವಿಮಲವಹ ವಿದ್ಯೆ,
ಲೋಕೋತ್ತರತೆಯಾಂತ ಕಸ್ತೂರಿಸುರಭಿ–
ಇವು ಮೂರು ಲೋಕದಲಿ ಹಬ್ಬುವುವು ತಾನೆ,
ಜಲದೊಳಿಕ್ಕಿದ ತೈಲಬಿಂದುವಿನ ತೆರದೆ

೨೪೦

ಮೂರ್ಖತನವೆಂಬುದೇ ಕಷ್ಟ, ಯೌವನದಲ್ಲಿ ದಾರಿದ್ರ್ಯ ಕಷ್ಟತರವು;
ಎಲ್ಲಕಿಂತಲು ಕಷ್ಟ ಪರರ ಮನೆಯಲಿ ವಾಸ, ಪರರ ಅನ್ನವನುಂಬುದು.

೨೪೧

ಕಾಮಭೋಗದಿಂದ ಕಾಮ ಶಮನಗೊಳ್ಳದು:
ಹವನದಿಂದ ಅಗ್ನಿಯೆಂತೊ ಅಂತೆ ಬೆಳೆವುದು.

೨೪೨

ಪಾಪ ಮಾಡುವನೊಬ್ಬ–ಫಲವನು ಭೋಗಿಸುವರು ಮಹಾಜನ;
ಭೋಗಿ ಬಿಡುಗಡೆ ಪಡೆವರಾದರೆ ದೋಷ ಕರ್ತನ ಹಿಡಿವುದು.

೨೪೩

ಬಂಧುಗಳು ಗುಣಹೀನರಾದರು ಅವರ ಸಂಗವೆ ಒಳ್ಳಿತು:
ಹೊಟ್ಟು ನೀಗಿದ ಅಕ್ಕಿ ಬಿತ್ತನೆಗೊಂಡರೆಂತದು ಬೆಳೆವುದು?

೨೪೪

ಇದ್ದಲನು ಕೆದರಿದರೆ ಬೆಂಕಿ ಜ್ವಲಿಸುವುದು,
ಕೆಣಕಿದರೆ ಪನ್ನಗವು ಹೆಡೆಯನೆತ್ತುವುದು.
ಸಂಕ್ಷೋಭೆಗೊಂಡಾಗ ಸರ್ವ ಜಂತುಗಳು
ಪ್ರಾಯಶಃ ತಮ್ಮ ಮಹಿಮೆಯನು ತೋರುವುವು.

೨೪೫

ಪ್ರಿಯನ ನುಡಿಯುವನೆಂಬ ಕತದಲಿ ನಂಬಲಾಗದು ದುಷ್ಟನ:
ಅವನ ಜಿಹ್ವಾಗ್ರದಲಿ ಜೇನಿದೆ, ಹೃದಯದಲಿ ಹಾಲಾಹಲ.

೨೪೬

ಯಾರು ಹರಯದಿ ಶಾಂತನಾತನೆ ಶಾಂತನೆಂದಾನರಿವೆನು:
ಮುಂದೆ ಧಾತುಗಳೆಲ್ಲ ಕುಗ್ಗಲು ಶಮವದಾರಿಗೆ ಹುಟ್ಟದು?

೨೪೭

ದೂರವಿದ್ದರು ಪರರ ದೋಷವ ಕಾಣುವುದರಲಿ ಜಾಣರು,
ಜನರು ತಮ್ಮದ ಕಾಣರು:
ಚಂದ್ರಬಿಂಬದೊಳಿಹ ಕಳಂಕವ ಕಣ್ಣು ಬಣ್ಣಿಸಬಲ್ಲುದು,
ತನ್ನ ಹುಣ್ಣನು ನೋಡದು.

೨೪೮

ತುಷ್ಟಮಾನಸವುಳ್ಳ ನರನಿಗೆ ಸಕಲ ಸಂಪತ್ತಿರುವುದು:
ಕಾಲೊಳೆಕ್ಕಡ ಧರಿಸಿದನನಿಗೆ ಭೂಮಿಯೇ ಚರ್ಮಾವೃತ.

೨೪೯

ಅರಿವು ತನ್ನೊಳಗಿಲ್ಲದವನಿಗೆ ಶಾಸ್ತ್ರದಿಂದೇನು?—
ಕಣ್ಣೆ ಇಲ್ಲದ ಮನುಜನಿಗೆ ಕನ್ನಡಿಯ ಫಲವೇನು?

೨೫೦

ಬರಲಿರುವ ಕಷ್ಟದ ನಿವಾರಣೆ ಮೊದಲೆ ಚಿಂತಿತವಾಗಲಿ:
ಹೊತ್ತಿ ಬೆಂಕಿಯೊಳುರಿಯುತಿರೆ ಮನೆ, ಬಾವಿ ತೋಡುವುದಾಗದು.

೨೫೧

ಚಣಚಣವಾಗಿಯೆ ವಿದ್ಯೆಯು ಗಳಿಪುದು, ಕಣಕಣವಾಗಿಯೆ ಅರ್ಥವನು;
ಚಣವನು ಬಿಟ್ಟರೆ ವಿದ್ಯೆಯದೆಲ್ಲಿದೆ, ಕಣವಿಲ್ಲದೆ ಅರ್ಥವದುಂಟೆ?

೨೫೨

ಸ್ನೇಹ ಘಟಿಸದೆ ಇರುವುದೊಳ್ಳಿತು,
ಘಟಿಸಿ ಒಡೆದರೆ ಕಷ್ಟವು:
ಕಣ್ಣುಗಳು ಹೋದವನ ದುಃಖವು
ಹುಟ್ಟು ಕುರುಡನಿಗಿಲ್ಲವು.

೨೫೩

ಕೈಗಳು ಶರೀರಕ್ಕೆ ರೆಪ್ಪೆಗಳು ನಯನಕ್ಕೆ
ಪ್ರಿಯವನೆಸಗುವ ತೆರದಲಿ
ಹಿಂದು ಮುಂದೆಣಿಸದೆಯೆ ಪ್ರಿಯವನೆಸಗುವ ಮಿತ್ರ
ನಿಜವಾದ ಮಿತ್ರನಹನು.

೨೫೪

ಮುಪ್ಪು ಸಾವುಗಳು ತನಗಿಲ್ಲವೆನುವಂತೆ
ವಿದ್ಯೆ ಧನಗಳ ಪ್ರಾಜ್ಞ ಚಿಂತಿಸಲುಬೇಕು;
ಮೃತ್ಯು ಕೇಶವ ಹಿಡಿದು ಎಳೆವುದೆನುವಂತೆ
ಬದುಕಿಸಲಿ ಧರ್ಮವನು ಆಚರಿಸಬೇಕು.

೨೫೫

ಕಾಕವೂ ಕಪ್ಪಹುದು, ಪಿಕವಹುದು ಕಪ್ಪು;
ಚೈತ್ರ ಬರೆ, ಕಾಕ ಕಾಕವೆ, ಪಿಕವು ಪಿಕವೆ.

೨೫೬

ಸ್ವಪ್ರಯತ್ನದಿ ಹಿಂದೆ ಗೈದ ಕರ್ಮವನೆ ಜನ ವಿಧಿಯೆಂಬರು;
ಅದರಿಂದ, ಸತ್ಪ್ರಯತ್ನವ ಗೈದು ವಿಧಿಯ ನರ ತೊಡೆಯಬಲ್ಲ.

೨೫೭

ಕಪ್ಪೆಗಳು ಬಾವಿಯಲಿ ಕುಳಿತು ನಿರ್ಭಯವಾಗಿ ಗರ್ಜಿಸುವುವು,
ಆನೆಸೊಂಡಿಲಿನಂಥ ಕೃಷ್ಣಸರ್ಪಗಳರಿವು ಬರುವತನಕ.

೨೫೮

ವ್ರಣವ ಬಯಸುವುವು ನೊಣ; ಭೂಮಿಪತಿಗಳಿಗೆ ಧನದಾಸೆ;
ಕಲಹದಲಿ ನೀಚರಿಗೆ, ಶಾಂತಿಯಲಿ ಸಾಧುಗಳಿಗಾಸೆ.

೨೫೯

ನನ್ನದೆಂಬುದು ಪರಮದುಃಖಕರವಹುದು,
ನನದಲ್ಲವೆನ್ನುವುದು ಪರಮ ಸುಖಕರವು;
ನನ್ನದಾಗಿದೆ, ನನ್ನದಲ್ಲ– ಎಂಬೆರಡು
ಕಾರಣಗಳಾಗಿಹವು ಬಂಧ, ಮೋಕ್ಷಕ್ಕೆ.

೨೬೦

ಸತ್ಯವನು ನುಡಿಯುವುದೆ ಸಾಧುವಾದುದು; ಸತ್ಯಕಿಂತ ಮೇಲಿಲ್ಲ;
ಎಲ್ಲವೂ ಸತ್ಯವನು ಆಧರಿಸಿಹುದು, ಎಲ್ಲ ಸತ್ಯಸಿಸ್ಥಿತವು.

# ಅರ್ಥಸೂಚಿ

ಅಂತಕಾಲಯ - ಯಮನ ಮನೆ
ಅಂಬರ - ಬಟ್ಟೆ
ಅಂಬು - ಬಾಣ
ಅನಾರ್ಯ - ನೀಚ
ಅನುವರ್ತಿಸು - ಹಿಂಬಾಲಿಸು
ಅಮೃತಕಿರಣ - ಚಂದ್ರ
ಅರ್ಥಾಗಮನ - ಹಣ ಬರುವುದು
ಆರ್ಯ - ದೊಡ್ಡವನು
ಇಂಧನ - ಕಟ್ಟಿಗೆ
ಉತ್ಕರ್ಷ - ಹೆಚ್ಚಳ
ಉತ್ತರಿಸು - ದಾಟು
ಉನ್ಮತ್ತ - ಹುಚ್ಚ
ಉಪಾಧಿ - ವಿಶೇಷ ಲಕ್ಷಣ
ಉಳ್ಳಿ - ಈರುಳ್ಳಿ
ಋಣ - ಸಾಲ
ಕತ - ಕಾರಣ
ಕತಕ ಬೀಜ - ಚಿಲ್ಲದ ಬೀಜ
ಕರ - ಕಿರಣ
ಕರ್ಣಧಾರ - ಹಡಗಿನ ಚಾಲಕ
ಕಲ್ಪಕುಜ - ಕಲ್ಪವೃಕ್ಷ
ಕಾಕ - ಕಾಗೆ
ಕಾಪುರುಷ - ಅಧಮವ್ಯಕ್ತಿ
ಕಾಷ್ಠ - ಒಣಮರ
ಕಾಳಕೂಟ - ವಿಷ
ಕಿರಾತಿ - ಬೇಡಿತಿ
ಕೇಸರಿ - ಸಿಂಹ
ಕೋಶ - ಮೊಗ್ಗು
ಕ್ಲಾಂತ - ಬಳಲಿದ
ಕ್ಷೇತ್ರ - ಹೊಲ, ಗದ್ದೆ
ಕ್ಲೈಬ್ಯ - ನಪುಂಸಕತ್ವ
ಖಳ - ದುಷ್ಟ
ಗಮನ - ಹೋಗುವುದು
ಗತಾನುಗತಿಕ - ಮುಂದಿನವರ ಅನುಕರಣ
ಗಾಂಧರ್ವವಿದ್ಯೆ - ಸಂಗೀತ
ಗುಣಿ - ಗುಣವುಳ್ಳವನು
ಗುಹ್ಯ - ಮರ್ಮಸ್ಥಾನ
ಚಂದ್ರಕಾಂತ - ಒಂದು ಶಿಲೆ
ಚತುರಾನನ - ಬ್ರಹ್ಮ
ಚಿರಕಾಲ - ಬಹಳ ಕಾಲ
ಚೂತ - ಮಾವು
ಜನಪದ - ದೇಶ
ಜಿಹ್ವಾಗ್ರ - ನಾಲಗೆಯ ತುದಿ
ದಾತಾರ - ದಾನಿ
ದಿಗಂಬರ - ನಗ್ನ
ದೋಹದ - ಗಿಡಗಳ ಬಯಕೆ
ದೌರ್ಜನ್ಯ - ದುಷ್ಟತನ
ಧನೇಶ - ಕುಬೇರ
ಧೇನು - ಹಸು
ನಗೇಶ - ಹಿಮಾಲಯ
ನಿತ್ಯತೆ - ಶಾಶ್ವತತೆ
ನಿವಹ - ಗುಂಪು
ನೀರೇಜ - ತಾವರೆ
ಪತಿತ - ಬಿದ್ದವನು
ಪಥ್ಯ - ಹಿತಕರವಾದುದು
ಪನ್ನಗ - ಹಾವು
ಪಯೋಧಿ - ಸಮುದ್ರ
ಪರದಾರ - ಇನ್ನೊಬ್ಬರ ಹೆಂಡತಿ

ಪರಾರ್ಥ - ಇನ್ನೊಬ್ಬರ ಕೆಲಸ
ಪರಿಭವಿಸು - ಸೋಲಿಸು
ಪಾದಪ - ಮರ
ಪಾರಿವ - ಪಾರಿವಾಳ
ಪೀತಾಂಬರ-ಹಳದಿವಸ್ತ್ರ ಧರಿಸಿದ ವಿಷ್ಣು
ಪುರುಷಕಾರ - ಮಾನವ ಪ್ರಯತ್ನ
ಪೂರ - ಪ್ರವಾಹ
ಪ್ರಮದೆ - ಹರಯದ ಹೆಣ್ಣು
ಬಿಂದು - ಸೊನ್ನೆ
ಬಿಲ್ವ - ಬೆಲ್ಲವತ್ತದ ಕಾಯಿ
ಭಾರ್ಯೆ - ಹೆಂಡತಿ
ಭೀರು - ಹೇಡಿ
ಭುಜಂಗಮ - ಹಾವು
ಭೂಮಿಪ - ದೊರೆ
ಭೃತ್ಯ - ಸೇವಕ
ಭೇಷಜ - ಮದ್ದು
ಮಂಡನ - ಅಲಂಕಾರ
ಮದಿರೆ - ಮದ್ಯ
ಮನೋರಥ - ಬಯಕೆ
ಮುಕ್ತಾಫಲ - ಮುತ್ತು
ರತ್ನಾಕರ - ಸಮುದ್ರ
ರಸನೆ - ನಾಲಗೆ
ರಿಪು - ಹಗೆ
ರುಜೆ - ರೋಗ
ಲವ - ಚೂರು
ಲೇಶ - ಕಣ
ಲೋಕೋತ್ತರ - ಅಸಾಮಾನ್ಯ
ಲೌಲ್ಯ - ದುರಾಶೆ
ವರ್ಜನೀಯ - ಬಿಡತಕ್ಕುದು
ವಶಿ - ವಿಧೇಯ
ವಿಚಕ್ಷಣ - ಬಲ್ಲವನು
ವಿಡಂಬ - ಸೋಗು
ವಿತ್ತ - ಹಣ
ವಿಪರೀತ - ತಿರುಗುಮುರುಗು
ವಿಶಾಖೆ - ಒಂದು ನಕ್ಷತ್ರ
ವಿಸರ್ಜಿತ - ಬಿಟ್ಟ
ವ್ಯಸನ - ದುಶ್ಚಟ
ವ್ರಣ - ಗಾಯ
ಶಠ - ದುಷ್ಟ
ಶೇಷ - ಉಳಿದುದು
ಸಂಗ್ರಾಮ - ಯುದ್ಧ
ಸಖ್ಯ - ಗೆಳೆತನ
ಸದ್ವೃತ್ತ - ಒಳ್ಳೆಯ ನಡತೆ
ಸುಕರ - ಸುಲಭ
ಸುರಭಿ - ಸುವಾಸನೆ
ಸುಹೃದಯ - ಮಿತ್ರ
ಸೌರಭ - ಸುವಾಸನೆ
ಹೇತು - ಕಾರಣ
ಹೈಮಾಂಬು - ಚಿನ್ನದ ನೀರು

# ತಾಲಿಮಾರ್ಗಾನಿ

**ಸಂಸ್ಕೃತದಿಂದ ಸಿ.ಪಿ.ಕೆ. ಅವರ ಅನುವಾದಗಳು**

ಭಾಸನ ಎರಡು ನಾಟಕಗಳು
ಕನ್ನಡ ಯಶೋಧರಚರಿತ
ಕನ್ನಡ ನಾಗಾನಂದ
ಕನ್ನಡ ರತ್ನಾವಳಿ
ಕನ್ನಡ ಪ್ರಿಯದರ್ಶಿಕಾ
ಕನ್ನಡ ಸೌಂದರ್ಯಲಹರಿ
ಕನ್ನಡ ವೇಣೀಸಂಹಾರ
ಬೆಳಕಿನ ಹನಿಗಳು
ರಾಮಾಯಣ: ಬಾಲಕಾಂಡ (**ಇತರರೊಡನೆ**)

**ಬರಲಿವೆ:**

ವಿರಾಟಪರ್ವ
ಮಾಲತೀಮಾಧವ
ಅಭಿನವ ಅಭಿಜ್ಞಾನ ಶಾಕುಂತಲ
ಜಸಹರ ಚರಿಉ (**ಪ್ರಾಕೃತದಿಂದ**)

**—ಇತ್ಯಾದಿ**